# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 23, 2024

ಸಂಪುಟ : 51 ಸಂಚಿಕೆ : 131 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com


## ದಾವಣಗೆರೆ ಜಿಲ್ಲೆಯ ಮುತ್ಸದ್ದಿಗಳೂ, ಹಿರಿಯ ಕುಸ್ತಿಪಟುಗಳೂ ಆದ

# ಶ್ರೀ ಟಿ. ದಾಸಕರಿಯಪ್ಪ ನಿಧನ



ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಜೆಡಿಎಸ್ ಧುರೀಣರೂ,
ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರೂ, ಹಿರಿಯ ಕುಸ್ತಿಪಟುಗಳೂ ಆದ

**ಶ್ರೀ ಟಿ. ದಾಸಕರಿಯಪ್ಪ** ಅವರು,

ದಿನಾಂಕ 22-09-2024ರ ಭಾನುವಾರ ರಾತ್ರಿ 11.55ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರವನ್ನು 2ನೇ ಮುಖ್ಯ ರಸ್ತೆ, 1ನೇ ತಿರುವು, (ಬಕ್ಕೇಶ್ವರ ಶಾಲೆ ಹತ್ತಿರ) ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ಇಲ್ಲಿರುವ ಮೃತರ ಸ್ವಗೃಹದಲ್ಲಿ ದಿನಾಂಕ 23-09-2024ರ ಸೋಮವಾರ ಮಧ್ಯಾಹ್ನ 1.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 2.30ಕ್ಕೆ ದಿವಂಗತರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ತುಂಬಿಗೆರೆಯಲ್ಲಿರುವ ಅವರ ಸ್ವಂತ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು ;

- ✦ ಧರ್ಮಪತ್ನಿ : ಶ್ರೀಮತಿ ರಂಗಮ್ಮ ದಾಸಕರಿಯಪ್ಪ
- ✦ ಪುತ್ರ - ಸೊಸೆ : ಶ್ರೀಮತಿ ಉಮಾ ಮತ್ತು ಗಣೇಶ್ ದಾಸಕರಿಯಪ್ಪ, ಜೆಡಿಎಸ್ ಮುಖಂಡರು
- ✦ ಪುತ್ರ - ಸೊಸೆ : ಶ್ರೀಮತಿ ಸಂಧ್ಯಾ ಮತ್ತು ಶ್ರೀನಿವಾಸ್ ದಾಸಕರಿಯಪ್ಪ, ಉಪಾಧ್ಯಕ್ಷರು, ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ
- ✦ ಪುತ್ರಿ- ಅಳಿಯ : ಶ್ರೀಮತಿ ಲಲಿತಾ ಮತ್ತು ಪ್ರಕಾಶ್, ಶಿವಮೊಗ್ಗ
- ✦ ಪುತ್ರಿ -ಅಳಿಯ : ಶ್ರೀಮತಿ ತೇಜೇಶ್ವರಿ ಮತ್ತು ರವಿ, ಹುಲಿಕೋಟೆ - ಗದಗ
- ✦ ಪುತ್ರಿ - ಅಳಿಯ : ದಿ. ಶ್ರೀಮತಿ ನೇತ್ರಾವತಿ ಮತ್ತು ಜಗದೀಶ್, ತುಮಕೂರು

ಮತ್ತು ಮೊಮ್ಮಕ್ಕಳು ಹಾಗೂ ತುಂಬಿಗೆರೆ ಮುದುಕಪ್ಪ ವಂಶಸ್ಥರು

# ಮಲೇಬೆನ್ನೂರು : ಬೃಹತ್ ಶೋಭಾಯಾತ್ರೆಯೊಂದಿಗೆ ಹಿಂದೂ ಮಹಾಗಣಪತಿ ವಿಸರ್ಜನೆ

ಮಲೇಬೆನ್ನೂರು, ಸೆ. 22- ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ ಪ್ರತಿಷ್ಠಾಪಿಸಿದ್ದ 3ನೇ ವರ್ಷದ ಹಿಂದೂ ಮಹಾಗಣಪತಿಯನ್ನು ಬೃಹತ್ ಶೋಭಾಯಾತ್ರೆ ಮೂಲ ಗುರುವಾರ ರಾತ್ರಿ ಭದ್ರಾ ನಾಲೆಯಲ್ಲಿ ಶಾಸ್ತ್ರೋಕ್ತವಾಗಿ ವಿಸರ್ಜನೆ ಮಾಡಲಾಯಿತು.

ನೀರಾವರಿ ಇಲಾಖೆಯಿಂದ ಆರಂಭವಾದ ಶೋಭಾಯಾತ್ರೆಯಲ್ಲಿ ಮಹಾಗಣಪತಿ ಹಾಗೂ ಶ್ರೀರಾಮನ ಮೂರ್ತಿಗಳನ್ನು ಹೊತ್ತ 2 ಟ್ರ್ಯಾಕ್ಟರ್ ಮತ್ತು ಡಿಜೆಗಳನ್ನು ಹೊತ್ತ 3 ಟ್ರ್ಯಾಕ್ಟರ್‌ಗಳಿದ್ದವು. ಬೆಂಗಳೂರಿನ ತಮಟೆ ಮೇಳ, ಡೊಳ್ಳು, ಗೊಂಬೆ ಕುಣಿತ, ಜಾಂಜ್ ಮೇಳ, ಹಲಗೆ ಸೇರಿದಂತೆ ಇನ್ನಿತರೆ ಕಲಾಮೇಳಗಳು ಶೋಭಾಯಾತ್ರೆಗೆ ಮೆರಗು ತಂದವು.

ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬಿ.ಎಂ.ವಾಗೀಶ್ ಸ್ವಾಮಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಕೂಡಾ ಡಿಜೆ ಸಂಗೀತಕ್ಕೆ ತಾಳ ಹಾಕಿ ಗಮನ ಸೆಳೆದರು.

ಮಹಿಳೆಯರಿಗಾಗಿ ಪ್ರತ್ಯೇಕ ಡಿಜೆ ವ್ಯವಸ್ಥೆ ಮಾಡಲಾಗಿತ್ತು. ಮುಸ್ಲಿಂ ಬಾಂಧವರು ಮಹಾಗಣಪತಿಗೆ ಮಾಲಾರ್ಪಣೆ ಮಾಡಿ, ಮೆರವಣಿಗೆಯಲ್ಲಿದ್ದವರಿಗೆ ನೀರು, ಪಾನಕ, ಮಜ್ಜಿಗೆ ವ್ಯವಸ್ಥೆ ಮಾಡುವ ಮೂಲಕ ಸಾಮರಸ್ಯ ಮೆರೆದರು.

ಹಿಂದೂ ಮಹಾಗಣಪತಿ ಸಮಿತಿಯವರು ದಾನಿಗಳ ನೆರವಿನಿಂದ ರೈತ ಭವನದ ಬಳಿ ಏರ್ಪಡಿಸಿದ್ದ ಅನ್ನ ಸಂತರ್ಪಣೆ ಇಡೀ ದಿನ ನಿರಂತರವಾಗಿ ನಡೆಯಿತು.

ಪೊಲೀಸ್ ಠಾಣೆ ಕ್ರಾಸ್ ಬಳಿ ಹೆದ್ದಾರಿ ಪಕ್ಕದಲ್ಲಿ ಉದ್ಯಮಿ



ಚಿಟ್ಟಕ್ಕಿ ರಮೇಶ್ ಮತ್ತು ಮೇದಾರ್ ರವಿ ಅವರು ಈ ವರ್ಷವೂ 15 ಸಾವಿರ ಲಾಡು ಉಂಡಿಗಳನ್ನು ಜನರಿಗೆ ವಿತರಣೆ ಮಾಡಿದರು.

ಮುಖ್ಯ ವೃತ್ತದ ಬಳಿ ಪೇಟೆ ಬೀದಿ ಗೆಳೆಯರ ಬಳಗದ ಮೆಡಿಕಲ್ ಷಾಪ್ ಎನ್.ಕೆ.ರಾಜೀವ್, ತಳಸದ ಸಂತೋಷ್, ರಂಗನಾಥ ಗುಪ್ತಾ, ಎಂ ಹೆಚ್ ಶರಣ್, ಕಲ್ಮೇಶ್, ತಳಸದ ಭರತ್, ಗಿರೀಶ್, ಮಂಜು ಸೇರಿದಂತೆ ಇನ್ನೂ ಅನೇಕರು ಲೆಮನ್ ರೈಸ್ ವಿತರಿಸಿದರು. ಇದೇ ಮೊದಲ ಬಾರಿಗೆ ಮಹಾಗಣಪತಿಯ ಸಿದ್ಧಿ ಧ್ವಜವನ್ನು ಮುಖ್ಯ ವೃತ್ತದಲ್ಲಿ ಹರಾಜು ಮಾಡಿದ್ದು ವಿಶೇಷವಾಗಿತ್ತು. ಬೆಂಗಳೂರಿನ ಸೂರ್ಯ

**ಸಾಮರಸ್ಯ ಮೆರೆದ ಮುಸ್ಲಿಂ ಬಾಂಧವರು**

ಟೆಕ್ನಾಲಜಿಯ ಬಿ. ಅನಿಲ್ ಕುಮಾರ್ ಅವರು 68,101 ರೂಗಳಿಗೆ ಸಿದ್ಧಿ ಧ್ವಜ ಪಡೆದರು.

ಶಾಸಕ ಬಿ.ಪಿ.ಹರೀಶ್, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಶಾಸಕರಾದ ಹೆಚ್.ಎಸ್.ಶಿವಶಂಕರ್, ಎಸ್.ರಾಮಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಕಾಂಗ್ರೆಸ್ ಮುಖಂಡ ಹೆಚ್.ಎಸ್. ನಾಗರಾಜ್, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಬಿಜೆಪಿ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹನಗವಾಡಿ ಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಭದ್ರಾ ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ಉದ್ಯಮಿ ವೈ.ವಿರೂಪಾಕ್ಷಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಕೆ.ಜಿ.ಲೋಕೇಶ್, ಭೋವಿ ಶಿವು, ಬಿ. ಮಂಜುನಾಥ್, ಬಿ.ವೀರಯ್ಯ, ಎ.ಆರೀಫ್, ಅಲಿ, ಬಿ.ರಫೀಕ್ ಸಾಬ್, ಬಸವರಾಜ್ ದೊಡ್ಮನಿ, ಸಾಬೀರ್ ಅಲಿ, ಭಾನುವಳ್ಳಿ ಸುರೇಶ್, ಎಕ್ಕೆಗೊಂದಿ ಕರಿಯಪ್ಪ, ಶ್ರೀಮತಿ ವಿಜಯಲಕ್ಷ್ಮಿ ಗಂಗಾಧರ್, ಶ್ರೀಮತಿ ಸುಧಾ ರಾಜು, ಭೋವಿಕುಮಾರ್, ಚಮನ್ ಷಾ, ಎಂ.ಬಿ. ರುಸ್ತುಂ, ಬಂಗಾರದ ಅಂಗಡಿ ರಾಜು, ಎಂ.ಹೆಚ್.ಮಹೇಂದ್ರ, ಸುಬ್ಬಿ ರಾಜಣ್ಣ, ಎ.ಕೆ.ಲೋಕೇಶ್, ಪಿ.ಆರ್.ಕುಮಾರ್, ಪಿ.ಹೆಚ್.ಶಿವಕುಮಾರ್, ಕೆ.ಎಂ. ಗಜೇಂದ್ರ ಸ್ವಾಮಿ, ಹೊಸಳ್ಳಿ ಕರಿಬಸಪ್ಪ, ಬಟ್ಟೆ ಅಂಗಡಿ ವಿಶ್ವ, ಎ.ಕೆ.ನಾಗರಾಜ್, ಕಿರಣ್, ಓ.ಜಿ.ಧನು, ದೊರೆ, ಕೆ. ಸಿ.ಚಿದಾನಂದ್, ಆರ್ಟ್ಸ್ ಮಂಜು, ಪೊಲೀಸ್ ಮಂಜು, ಎಸ್ ಕೆ ಕುಮಾರ್, ಸಂಜಯ್, ಕಾರ್ತಿಕ್, ಮನೋಜ್, ಕಡ್ಲೆಗೊಂದಿ ಕೇಶವ, ಲಿಂಗರಾಜ್, ಮೇದಾರ್ ರವಿ ಜಿಗಳಿಯ ಜಿ ಪಿ ಹನುಮಗೌಡ, ಎಂ.ವಿ. ನಾಗರಾಜ್, ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್, ಜಿ.ಸುನೀಲ್, ಕುಂಬಳೂರು ವಾಸು, ಬಿ.ಶಂಭುಲಿಂಗಪ್ಪ, ಹರಳಹಳ್ಳಿ ಶ್ರೀನಿವಾಸ್, ಸೇರಿದಂತೆ ಇತರರು ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಶೋಭಾಯಾತ್ರೆಯ ನೇತೃತ್ವ ವಹಿಸಿದ್ದ ಬಿ.ಎಂ.ವಾಗೀಶ್ ಸ್ವಾಮಿ, ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ, ಖಜಾಂಚಿ ಪಿ.ಆರ್.ರಾಜು, ಚಿಟ್ಟಕ್ಕಿ ನಾಗರಾಜ್ ಅವರು, ಶೋಭಾಯಾತ್ರೆ ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ಜರುಗಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಗರಿ, ಕಿರಣ್, ಪಿ.ಎಸ್.ಐ ಪ್ರಭು ಕೆಳಗಿನಮನಿ ಅವರ ನೇತೃತ್ವದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ಕೈಗೊಂಡಿದ್ದರು.

## ಅಮೆರಿಕದ ಸಹಭಾಗಿತ್ವದಲ್ಲಿ ರಾಷ್ಟ್ರೀಯ ರಕ್ಷಣಾ ಸೆಮಿಕಂಡಕ್ಟರ್ ಘಟಕ

ವಾಷಿಂಗ್ಟನ್, ಸೆ. 22 - ಅಮೆರಿಕದ ಸಹಭಾಗಿತ್ವದಲ್ಲಿ ಭಾರತ ತನ್ನ ಮೊದಲ ರಾಷ್ಟ್ರೀಯ ರಕ್ಷಣಾ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕವನ್ನು ಹೊಂದಲಿದೆ. ಇದರಲ್ಲಿ ಭಾರತ ಹಾಗೂ ಅಮೆರಿಕಗಳಿಗಾಗಿ ಸೈನಿಕ ಉಪಕರಣಗಳನ್ನು ಉತ್ಪಾದಿಸಲಾಗುವುದು. ದೂರಸಂಪರ್ಕ ಹಾಗೂ ಎಲೆಕ್ಟ್ರಾನಿಕ್ಸ್ ಉದ್ದೇಶಗಳಿಗೂ ಸೆಮಿಕಂಡಕ್ಟರ್ ಉತ್ಪಾದನೆ ಮಾಡಲಾಗುವುದು.

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಅಮೆರಿಕದ ಅಧ್ಯಕ್ಷ ಜೋ ಬಿಡನ್ ಮಾತುಕತೆ ನಡೆಸಿದ ನಂತರ ಉಭಯ ದೇಶಗಳು ಜಂಟಿ ಯೋಜನೆ ಕೈಗೊಳ್ಳುವ ಘೋಷಣೆ ಮಾಡಿವೆ. ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಯ ಈ ಘೋಷಣೆ ಮಹತ್ವದ ಬೆಳವಣಿಗೆಯಾಗಿದೆ.

ಈ ಯೋಜನೆ ಭಾರತದ ಸೆಮಿಕಂಡಕ್ಟರ್ ಯೋಜನೆಗೆ ನೆರವಾಗಲಿದೆ. ಇದು ಭಾರತವಷ್ಟೇ ಅಲ್ಲದೇ, ವಿಶ್ವದ ಮೊದಲ ರಾಷ್ಟ್ರೀಯ ರಕ್ಷಣಾ ಮಲ್ಟಿ ಮೆಟೀರಿಯಲ್ ಘಟಕವಾಗಲಿದೆ ಎಂದು ಹೇಳಲಾಗುತ್ತಿದೆ.

ಇದೇ ಮೊದಲ ಬಾರಿಗೆ ಅಮೆರಿಕ ಸೈನ್ಯವು ಭಾರತದ ಜೊತೆಗೆ ಉನ್ನತ ಮೌಲ್ಯದ ತಂತ್ರಜ್ಞಾನ ಸಹಭಾಗಿತ್ವಕ್ಕೆ ಮುಂದಾಗಿದೆ. ಇದು ನಾಗರಿಕ ಅಣು ಒಪ್ಪಂದದಷ್ಟೇ ಮಹತ್ವದ್ದಾಗಿದೆ ಎಂದು ಈ ವಿಷಯದ ಪರಿಣಿತರು ತಿಳಿಸಿದ್ದಾರೆ.

## ವಿಚಾರಣೆ ವೇಳೆ ಆಡಿದ ಮಾತಿಗೆ ಹೈಕೋರ್ಟ್ ನ್ಯಾಯಮೂರ್ತಿ ವಿಷಾದ

ಬೆಂಗಳೂರು, ಸೆ. 22 – ವಿಚಾರಣೆಯ ವೇಳೆ ತಾವು ನೀಡಿದ ಆಕ್ಷೇಪಾರ್ಹ ಹೇಳಿಕೆಗಾಗಿ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ವಿ. ಶ್ರೀಶಾನಂದ ವಿಷಾದ ವ್ಯಕ್ತಪಡಿಸಿದ್ದಾರೆ. ನ್ಯಾಯಮೂರ್ತಿ ನೀಡಿದ ಹೇಳಿಕೆಗಳು ವೈರಲ್ ಆದ ನಂತರ, ಸುಪ್ರೀಂ ಕೋರ್ಟ್ ಈ ಬಗ್ಗೆ ಸ್ವಯಂ ಪ್ರೇರಿತ ಪರಿಶೀಲನೆ ನಡೆಸಿತ್ತು.

ಹೈಕೋರ್ಟ್ ನ್ಯಾಯಮೂರ್ತಿ ಹೇಳಿಕೆಯ ಬಗ್ಗೆ ವರದಿ ನೀಡುವಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು.

ಬೆಂಗಳೂರಿನ ಕೆಲ ಪ್ರದೇಶಗಳನ್ನು 'ಪಾಕಿಸ್ತಾನ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಟಿಪ್ಪಣಿ ಮಾಡಿದ ವಿಡಿಯೋ ವೈರಲ್ ಆಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ನ್ಯಾಯಮೂರ್ತಿ ಶ್ರೀಶಾನಂದ, ನ್ಯಾಯಿಕ ಪ್ರಕ್ರಿಯೆ ವೇಳೆ ನಾನು ಮಾಡಿದ ಕೆಲ ಟಿಪ್ಪಣಿಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪಾಗಿ ಬಿಂಬಿಸಲಾಗಿದೆ. ಈ ಟಿಪ್ಪಣಿಗಳು ಅನುದ್ದೇಶಿತವಾಗಿವೆ ಹಾಗೂ ಯಾರಿಗೂ ನೋವು ನೀಡುವ ಉದ್ದೇಶದ್ದಲ್ಲ. ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದು ಹೇಳಿದ್ದಾರೆ.

# ರೈತರಿಗೆ ಸಮಗ್ರ ಯೋಜನೆ ಜಾರಿ ತರಲಿದ್ದೇನೆ



(3ನೇ ಪುಟದಿಂದ) 20 ಕೋಟಿ ಮಂಜೂರು ಮಾಡಿಸಿದ್ದು, ನಮ್ಮ ಯೋಜನೆಗಳು ಕಳಪೆಯಾಗಲು ನಾವು ಬಿಡುವುದಿಲ್ಲ ಎಂದರು.

ಕ್ಷೇತ್ರದಲ್ಲಿ 25 ವರ್ಷ ಆಡಳಿತ ನಡೆಸಿದವರನ್ನು ಕಡೆಗಣಿಸಿ, ಕಾಂಗ್ರೆಸ್ ಪಕ್ಷ ಹಾಗೂ ಸಂಸದೆ ಡಾ. ಪ್ರಭಾ ಅವರ ಗೆಲುವಿಗೆ ಕಾರಣರಾದ ಎಲ್ಲರಿಗೂ ಶಾಮನೂರು ಕುಟುಂಬ ಋಣಿಯಾಗಿ ಇರಲಿದೆ ಎಂದು ಹೇಳಿದರು.

ಕಾರ್ಯಕರ್ತರ ಶ್ರಮದಿಂದಲೇ ಜನ ಪ್ರತಿನಿಧಿಗಳಾಗಲು ಸಾಧ್ಯ. ಹಾಗಾಗಿ ಪಕ್ಷದ ಕಾರ್ಯಕರ್ತರು ಬರುವ ದಿನಗಳಲ್ಲಿ ಜಿ.ಪಂ, ತಾ.ಪಂ ಹಾಗೂ ಪಾಲಿಕೆಯ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದು ಹೇಳಿದರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ, ದಾವಣಗೆರೆಯ ಇತಿಹಾಸವನ್ನೇ ಬದಲಿಸುವ ಸಂಸದರನ್ನು ಆಯ್ಕೆ ಮಾಡಿದ್ದಿರೀ. ರಾಜ್ಯದ ಹಿತಕ್ಕೆ ದಕ್ಕೆ ಬರದಂತೆ ಅವರು ಜನ

> **ಮೊನ್ನೆ ನಡೆದ ಕೋಮು ಗಲಭೆಗೆ ಬಿಜೆಪಿಯವರೇ ಕಾರಣ. ಹೊನ್ನಾಳಿಯ ರೇಣುಕಾಚಾರ್ಯ ದಾವಣಗೆರೆಗೆ ಬಂದು ಪ್ರಚೋದನೆ ನೀಡುವುದಕ್ಕೆ ಅಧಿಕಾರಿಗಳು ಆಸ್ಪದ ನೀಡಬಾರದು.**
> **- ಶಾಮನೂರು ಶಿವಶಂಕರಪ್ಪ, ಶಾಸಕ**


ಸೇವೆ ಮಾಡಲಿದ್ದಾರೆ ಎಂದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಚುನಾವಣೆ ಪೂರ್ವದಲ್ಲಿ ನಾವು 1ಲಕ್ಷ ಬಹುಮತದಿಂದ ಗೆಲ್ಲುತ್ತೇವೆ ಎಂದು ನಿರೀಕ್ಷಿಸಿದ್ದೆವು ಆದರೆ ಕೇವಲ 28 ಸಾವಿರ ಮತಗಳಿಂದಷ್ಟೇ ಗೆದ್ದಿದ್ದೇವೆ. ಹಾಗಾಗಿ ಈ ಕ್ಷೇತ್ರವನ್ನು ಕಾಂಗ್ರೆಸ್ಸಿನ ಭದ್ರ ಕೋಟೆಯಾಗಿಸಲು ಪಕ್ಷದ ಕಾರ್ಯಕರ್ತರು, ಕ್ಷೇತ್ರದ ಜನರ ಮನವೊಲಿಸಲು ಇನ್ನಷ್ಟು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮಲ್ಲಿಕಾರ್ಜುನ್ ಅವರ ಜನ್ಮದಿನದ ಪ್ರಯುಕ್ತ ರಕ್ತದಾನದ ದೊಡ್ಡ ಯೋಜನೆ ಹಾಕಿಕೊಂಡಿದ್ದೆವು ಇದರಲ್ಲಿ 3 ಸಾವಿರ ಜನ ರಕ್ತದಾನ ಮಾಡಿದ್ದು, ಅವಶ್ಯ ಇರುವ ರೋಗಿಗಳಿಗೆ ಉಚಿತವಾಗಿ ರಕ್ತ ನೀಡಲಾಗುವುದು ಎಂದು ಹೇಳಿದರು.

ಈ ವೇಳೆ ಶಾಸಕರಾದ ದೇವೆಂದ್ರಪ್ಪ, ಕೆ.ಎಸ್. ಬಸವಂತಪ್ಪ, ಶಾಂತನಗೌಡ, ಮಾಜಿ ಶಾಸಕ ಎಸ್. ರಾಮಪ್ಪ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ಮೇಯರ್ ವಿನಾಯಕ ಪೈಲ್ವಾನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ, ಅನಿತಾ ಬಾಯಿ, ರೇವಣಸಿದ್ದಪ್ಪ,ಎಂ.ಜಿ. ರಾಜಶೇಖರಪ್ಪ, ಡಿ. ಬಸವರಾಜ್, ಚಮನ್‌ಸಾಬ್, ದಿನೇಶ್ ಕೆ. ಶೆಟ್ಟಿ, ಹೆಚ್. ಆಂಜನೇಯ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

## ಸಿರಿಗೆರೆಯಲ್ಲಿ ಇಂದು ಜಗದ್ಗುರು ಶಿವಕುಮಾರ ಶ್ರೀಗಳ ಶ್ರದ್ಧಾಂಜಲಿ



ತರಳಬಾಳು ಮಠದ ಶ್ರೀ ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ 32ನೇ ಶ್ರದ್ಧಾಂಜಲಿ ಸಮಾರಂಭವು ಸಿರಿಗೆರೆಯ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ನಡೆಯುತ್ತಿದ್ದು, ಇಂದು ಸಂಜೆ 6 ಗಂಟೆಗೆ ನಡೆಯುವ ಸಮಾರಂಭದ ಸಾನ್ನಿಧ್ಯವನ್ನು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸುವರು.

ಇಂದು ಸಂಜೆ 6ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಿ.ವೈ. ವಿಜಯೇಂದ್ರ, ಡಿ.ಜೆ. ಶಾಂತನಗೌಡ, ಕೃಷಿ ವಿಜ್ಞಾನಿ ಡಾ. ಎಸ್.ಎಲ್. ಕೃಷ್ಣಮೂರ್ತಿ, ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜಮೂರ್ತಿ, ಕುಲಪತಿಗಳಾದ, ಸೂರ್ಯಪ್ರಸಾದ, ನಿವೃತ್ತ ಪ್ರಾಚಾರ್ಯ ಡಾ. ನಾ ಲೋಕೇಶ್ ಒಡೆಯರ್ ಭಾಗವಹಿಸುವರು.

ನಾಳೆ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೃಹ ಸಚಿವ ಡಾ. ಜಿ. ಪರಮೇಶ್ವರ್, ಸಚಿವ ಎಂ.ಬಿ. ಪಾಟೀಲ್, ಸಚಿವ ಈಶ್ವರ್ ಬಿ. ಖಂಡ್ರೆ, ಜಿ.ಎಂ. ಸಿದ್ದೇಶ್ವರ, ಸಾಧುಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ, ಶಂಕರ್ ಬಿದರಿ ಪಾಲ್ಗೊಳ್ಳಲಿದ್ದಾರೆ.

## ಚೆಸ್ ಒಲಂಪಿಯಾಡ್ : ಭಾರತೀಯ ಪುರುಷ, ಮಹಿಳಾ ತಂಡಗಳಿಗೆ ಪ್ರಶಸ್ತಿ

ಬುಡಾಪೆಸ್ಟ್, ಸೆ. 22 - ಚೆಸ್ ಒಲಂಪಿಯಾಡ್ ಸ್ಪರ್ಧೆಯಲ್ಲಿ ಭಾರತದ ಪುರುಷ ಹಾಗೂ ಮಹಿಳಾ ತಂಡಗಳೆರಡೂ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿವೆ. ಚೆಸ್ ವಲಯದಲ್ಲಿ ಭಾರತ ಮೊದಲ ಬಾರಿಗೆ ಈ ಐತಿಹಾಸಿಕ ಸಾಧನೆ ಮಾಡಿದೆ.

ಭಾರತೀಯ ಪುರುಷರ ತಂಡ ಸ್ಲೋವೇನಿಯ ವಿರುದ್ಧ 3.5-0.5 ಅಂತರದ ಗೆಲುವು ದಾಖಲಿಸಿದೆ. ಮಹಿಳಾ ತಂಡ ಅಜರ್ಬೈಜಾನ್ ವಿರುದ್ಧ ಇದೇ ಅಂತರದಲ್ಲಿ ಗೆಲುವು ಸಾಧಿಸಿದೆ.

ಈ ಹಿಂದೆ ಚೈನಾ ಹಾಗೂ ಸೋವಿಯತ್ ಒಕ್ಕೂಟಗಳ ಮಹಿಳಾ ಹಾಗೂ ಪುರುಷ ತಂಡಗಳು ಒಂದೇ ಬಾರಿಗೆ ಚೆಸ್ ಒಲಂಪಿಯಾಡ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ್ದವು. ಈ ಹಿಂದೆ ಭಾರತೀಯ ಪುರುಷರ ತಂಡ 2014 ಹಾಗೂ 2022 ರಲ್ಲಿ ಕಂಚಿನ ಪದಕ ಪಡೆದಿತ್ತು. 2022 ರಲ್ಲಿ ಮಹಿಳಾ ತಂಡ ಕಂಚಿನ ಪ್ರಶಸ್ತಿ ಪಡೆದಿತ್ತು.

## ಹೊಸ ಹೊನ್ನತ್ತಿ ಕೇಂದ್ರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊಸ ಹೊನ್ನತ್ತಿ 110ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಗ್ರಾಮೀಣ ಫೀಡರ್‌ಗಳಾದ ಎಫ್-03 ನೂಕಾಪುರ, ಎಫ್-04 ಚಿಕ್ಕಹರಳಹಳ್ಳಿ, ಎಫ್-09 ಹೊನ್ನತ್ತಿ ಐ.ಪಿ, ಎಫ್-10 ಯಲ್ಲಾಪುರ ಐ.ಪಿ, ಎಫ್-11 ಹನುಮಾಪುರ ಐ.ಪಿ ಮತ್ತು ಎಫ್-12 ಹೊನ್ನತ್ತಿ ಎನ್.ಜೆ.ವೈ ಫೀಡರ್‌ಗಳ ಗ್ರಾಮೀಣ ಭಾಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ಜಿಲ್ಲೆಯ ಹಿರಿಯ ಗುತ್ತಿಗೆದಾರರೂ ಹಾಗೂ ಉದ್ಯಮಿಗಳೂ, ಅಪಾರ ದೈವಭಕ್ತರೂ, ಅಜಾತ ಶತ್ರು, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರ ಪರಮಾಪ್ತರಾಗಿದ್ದ,

**ಶ್ರೀ ರಾಜುರೆಡ್ಡಿ (ಶ್ರೀನಿವಾಸ ರೆಡ್ಡಿ)**

ಅವರು ದಿನಾಂಕ 21-09-2024ರಂದು ಅಕಾಲಿಕವಾಗಿ ನಮ್ಮನ್ನಗಲಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಸ್ನೇಹಿತರಿಗೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಹಿರಿಯ ಗುತ್ತಿಗೆದಾರರಾಗಿದ್ದ ಶ್ರೀ ರಾಜುರೆಡ್ಡಿಯವರು ದಾವಣಗೆರೆ ನಗರ ಹಾಗೂ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟ ಹಾಗೂ ಶಾಶ್ವತವಾಗಿ ನೂರಾರು ವರ್ಷ ಉಳಿಯುವಂತ ಕೆಲಸಗಳನ್ನು ಸಚಿವರಾದ ಶ್ರೀ ಎಸ್ ಎಸ್ ಮಲ್ಲಿಕಾರ್ಜುನ್‌ರವರ ಮಾರ್ಗದರ್ಶನದಂತೆ ಮಾಡಿದ್ದಾರೆ. ಅವರು ನಿರ್ವಹಿಸಿದ ಕಾಮಗಾರಿಗಳ ಪೈಕಿ ಪ್ರಮುಖವಾದವು ಐತಿಹಾಸಿಕ ಕುಂದುವಾಡ ಕೆರೆ, ಪಿ ಬಿ ರೋಡ್, ಪಿ ಬಿ ರೋಡ್‌ನಿಂದ ರಿಂಗ್ ರೋಡ್, ಜಗಳೂರು ರೋಡ್ ಬಡ್‌ಸ್ಟ್ಯಾಂಡ್, ಸೇರಿದಂತೆ ನೂರಾರು ರಸ್ತೆಗಳನ್ನು ನಿರ್ಮಿಸಿದ್ದಾರೆ. ಶ್ರೀ ರಾಜು ರೆಡ್ಡಿಯವರು ನಿರ್ವಹಿಸಿದ ಅಭಿವೃದ್ಧಿ ಕಾಮಗಾರಿಗಳು ನೂರಾರು ವರ್ಷ ಹಸಿರಾಗಿ ನಮ್ಮ ಕಣ್ಣ ಮುಂದೆ ನಿಲ್ಲಲಿವೆ. ಅವರ ನೆನಪು ನಮ್ಮ ಹೃದಯದಲ್ಲಿ ಸದಾಕಾಲ ಇರಲಿದೆ.

**ಡಿ. ಬಸವರಾಜ್, ಅಧ್ಯಕ್ಷರು**

**ದಾವಣಗೆರೆ ಜಿಲ್ಲಾ ಗುತ್ತಿಗೆದಾರರ ಸಂಘ (ರಿ.)**

# ಹರಿಹರೇಶ್ವರ ಅರ್ಬನ್ ಬ್ಯಾಂಕ್‌ಗೆ 2.66 ಲಕ್ಷ ರೂ. ಲಾಭ

ಹರಿಹರ, ಸೆ.22- ಹರಿಹರೇಶ್ವರ ಅರ್ಬನ್ ಕೋ- ಆಪರೇಟಿವ್ ಬ್ಯಾಂಕ್ ಈ ಸಾಲಿನಲ್ಲಿ 2.66 ಲಕ್ಷ ರೂಪಾಯಿ ತಾತ್ಕಾಲಿಕ ಲಾಭವನ್ನು ಗಳಿಸಿರುತ್ತದೆ ಎಂದು ಬ್ಯಾಂಕ್ ಅಧ್ಯಕ್ಷ ಕೆ. ರವಿಚಂದ್ರ ಹೇಳಿದರು.

ಕಾಟ್ವೆ ಭವನದಲ್ಲಿ ಬ್ಯಾಂಕ್‌ನ 67ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

68ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ನಮ್ಮ ಬ್ಯಾಂಕ್ 3413 ಸದಸ್ಯರನ್ನು ಹೊಂದಿದ್ದು, 63.42 ಲಕ್ಷ ರೂಪಾಯಿ ಷೇರು ಬಂಡವಾಳ ಹೊಂದಿದೆ. ಕಳೆದ ಸಾಲಿಗಿಂತ 4.51 ಲಕ್ಷ ರೂಪಾಯಿ ಷೇರು ಬಂಡವಾಳ ಹೆಚ್ಚಿಗೆ ಆಗಿರುತ್ತದೆ. 106.58 ಆಪದ್ಧನ ಮತ್ತು ಇತರೆ ನಿಧಿಗಳಿದ್ದು, 665.55 ಲಕ್ಷ ರೂಪಾಯಿ ಠೇವಣಿಯನ್ನು ಹೊಂದಿರುತ್ತದೆ. ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿಗಳಿಗೆ ಡಿ.ಐ. ಸಿಜಿಸಿ ವಿಮೆ ನಿಯಮಕ್ಕೆ ಒಳಪಟ್ಟು ಹಣ ಸಂಪೂರ್ಣ ಸುರಕ್ಷಿತವಾಗಿರುತ್ತದೆ ಎಂದರು.

ಷೇರುದಾರರ ಹಿತ ದೃಷ್ಟಿಯಿಂದ ಶೇ. 2 ರೂಪಾಯಿ ಬಡ್ಡಿಯನ್ನು ಕಡಿಮೆ ಮಾಡಿ



ಸಾಲವನ್ನು ನೀಡುವ ತೀರ್ಮಾನವನ್ನು ಆಡಳಿತ ಮಂಡಳಿ ಕೈಗೊಂಡಿದೆ ಎಂದರು.

ಜಿಲ್ಲಾ ಕೇಂದ್ರ ಬ್ಯಾಂಕ್, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ಗಳಲ್ಲಿ 466.60 ಲಕ್ಷ ಠೇವಣಿ ತೊಡಗಿಸಲಾಗಿದೆ. ಸದಸ್ಯರುಗಳಿಗೆ 24 ನೇ ಸಾಲಿನ ಅಂತ್ಯಕ್ಕೆ 260.70 ಲಕ್ಷ ರೂಪಾಯಿ ಸಾಲವನ್ನು ನೀಡಲಾಗಿದೆ ಎಂದು ಹೇಳಿದರು.

ಉಪಾಧ್ಯಕ್ಷ ಹಾಲೇಶ್ ಬಾವಿಕಟ್ಟಿ ಮಾತನಾಡಿ, ಬ್ಯಾಂಕಿನಲ್ಲಿ ವಿಮೆ, ಮರಣೋತ್ತರ ನಿಧಿ, ಡಿಮ್ಯಾಂಡ್ ಡ್ರಾಫ್ಟ್, ಛಾಪಾ ಕಾಗದ, ಎಸ್‌ಎಂಎಸ್. ಬ್ಯಾಂಕಿಂಗ್ ಯೋಜನೆ, ಕೋರ್ ಬ್ಯಾಂಕಿಂಗ್ ಇತ್ಯಾದಿ

**67ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷ ಕೆ. ರವೀಂದ್ರ**

ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಹೇಳಿದರು.

ವಾರ್ಷಿಕ ವರದಿಯನ್ನು ಪ್ರಧಾನ ವ್ಯವಸ್ಥಾಪಕ ಸಿ. ಪ್ರಕಾಶ್ ಮಂಡಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಬಿ.ಕೆ. ಅನ್ವರ್ ಪಾಷಾ, ಕೆ. ಅಣ್ಣಪ್ಪ, ಜಿ.ಕೆ. ಮಲ್ಲಿಕಾರ್ಜುನ್, ಪರಶುರಾಮ್ ಅಂಬೇಕರ್ ವಕೀಲರು, ವಿದ್ಯಾ ಆರ್. ರಾಘವೇಂದ್ರ ಮೆಹರ್ವಾಡೆ, ನಾಗೇಂದ್ರಸಾ ಕಾಟ್ವೆ, ಜಿ.ವಿ. ಪ್ರವೀಣ್ ಕುಮಾರ್, ಹೆಚ್.ಆರ್. ವೀಣಾ ಒಳಗಡ್ಡಿ ಸಿದ್ದೇಶ್, ಬಿ.ಆರ್. ಈಶ್ವರ್, ಸಿಬ್ಬಂದಿಗಳಾದ ಶಶಿಕಲಾ ಪರುಶುರಾಮ್, ರೇಖಾ ಮೆಹರ್ವಾಡೆ, ಬಿಂದು, ಹೆಚ್. ಸತ್ಯನಾರಾಯಣ ರಾವ್, ಪಿ. ಪ್ರಶಾಂತ್, ಎ ಶಿವಕುಮಾರ್, ಎ. ಕಿರಣ್, ಪಿಗ್ಮಿ ಸಂಗ್ರಾಹಕರಾದ ಬಿ.ಕೆ. ಕರಿಬಸಪ್ಪ, ಹೆಚ್.ಎಂ ಸುಮಾ, ಎಸ್. ವೀಣಾ, ಹೆಚ್. ನಾಗರಾಜ್, ಸಾಯಿಚಂದ್ರ, ಬಿ.ಡಿ. ಸುರೇಶ್, ಎಂ.ವಿ. ಲಲಿತಾ ಇತರರು ಹಾಜರಿದ್ದರು.

**ಎಸ್. ಲಿಂಗಪ್ಪ ಬಜ್ಜೇರ್ ನಿಧನ**




ದಾವಣಗೆರೆ ಸಿಟಿ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ಒಂದನೇ ಕ್ರಾಸ್ ವಾಸಿ ಶ್ರೀಮತಿ ಕೆ. ಸಿದ್ಧಗಂಗಮ್ಮನವರ ಪತಿ, ಬಂಜನಗೊಂಡನಹಳ್ಳಿ ಗ್ರಾಮದ ಪಿ.ಎಲ್.ಡಿ. ಬ್ಯಾಂಕ್ ನಿವೃತ್ತ ಮ್ಯಾನೇಜರ್

**ಶ್ರೀ ಎಸ್. ಲಿಂಗಪ್ಪ ಬಜ್ಜೇರ್** (75)

ಇವರು ದಿನಾಂಕ 22.9.2024ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.9.2024ರ ಸೋಮವಾರ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಿಸಲಾಗುವುದು.

**ದುಃಖತಪ್ತರು : ಪತ್ನಿ : ಕೆ. ಸಿದ್ಧಗಂಗಮ್ಮ, ಮಕ್ಕಳು : ಗಿರೀಶ್, ಮಾಲತಿ, ಸೊಸೆಯಂದಿರು, ಅಳಿಯಂದಿರು, ಸಹೋದರರು. ಮೊ : 96633 56882**

**ಸುಧಾ ಡಿ.ಬಿ. ನಿಧನ**



ದಾವಣಗೆರೆ ಸಿಟಿ ಎಸ್.ಎಸ್. ಲೇಔಟ್ 'ಎ' ಬ್ಲಾಕ್, 7ನೇ ಕ್ರಾಸ್ ವಾಸಿ **ಪ್ರೊ. ಡಿ. ಬಸವಲಿಂಗಪ್ಪ ಇವರ ಧರ್ಮಪತ್ನಿ**

**ಶ್ರೀಮತಿ ಸುಧಾ ಡಿ.ಬಿ.**

ಇವರು ದಿನಾಂಕ 22.09.2024ರ ಸಂಜೆ 5.30ಕ್ಕೆ ನಿಧನರಾದರು. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 23.09.2024ರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : 99160 13855, 97408 96820**

**ನಾಲ್ಕನೇ ವರ್ಷದ ಪುಣ್ಯಸ್ಮರಣೆ**



**ಬಾತಿ ಓಂಕಾರಪ್ಪ** ವಕೀಲರು **ಮತ್ತು** ಇವರ ಧರ್ಮಪತ್ನಿ **ಬಿ.ಓ ಸುವರ್ಣಮ್ಮ**

ನಮ್ಮೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕರಾಗಿ, ಭವಿಷ್ಯಕ್ಕೆ ಬೆಳಕಾಗಿ, ಆದರ್ಶವಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಅಜರಾಮರ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವವರು.

**ಮಕ್ಕಳು, ಅಳಿಯಂದಿರು**

**ಬಿ.ಓ. ಕೊಟ್ರೇಶ್-ಪದ್ಮ, ಬಿ.ಓ ಸಂತೋಷ್-ರತ್ನ ನಾಗವೇಣಿ-ರವೀಂದ್ರ, ಮಂಗಳ-ಶೇಕರ್, ಯಶೋಧ-ಪ್ರಕಾಶ್, ಇಂದಿರಾ-ಪ್ರಸಾದ್, ನಿರ್ಮಲ-ಪ್ರಸನ್ನ ಕುಮಾರ್ ಮತ್ತು ಪಾರ್ವತಿ-ಚನ್ನಬಸವಣ್ಣ ಮತ್ತು ಮೊಮ್ಮಕ್ಕಳು ದೊಡ್ಡಬಾತಿ-ದಾವಣಗೆರೆ.**

## ಭದ್ರಾ ಮೇಲ್ದಂಡೆ ನೀರು ನಿಲ್ಲಿಸಲು ಆಗ್ರಹ

ದಾವಣಗೆರೆ, ಸೆ. 22 –ಭದ್ರಾ ಮೇಲ್ದಂಡೆಗೆ ನೀರು ಹರಿಸುತ್ತಿರುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಲಿಂಗರಾಜ್ ಒತ್ತಾಯಿಸಿದ್ದಾರೆ.

ಅಣೆಕಟ್ಟು ತುಂಬಿ ಹರಿದಾಗ ಮಾತ್ರ ಭದ್ರಾ ಮೇಲ್ದಂಡೆಗೆ ನೀರು ಹರಿಸಬೇಕಿದೆ. ಆದರೆ, ಭದ್ರಾ ಅಣೆಕಟ್ಟೆ ತುಂಬಿದ ಸಂದರ್ಭದಲ್ಲಿ ನೀರು ಹರಿಸಿಲ್ಲ. ಈಗ ಒಳಹರಿವು ಕಡಿಮೆಯಾದ ನಂತರ ನೀರು ಹರಿಸಲಾಗುತ್ತಿದೆ ಎಂದವರು ಆಕ್ಷೇಪಿಸಿದ್ದಾರೆ.

ಭದ್ರಾ ಮೇಲ್ದಂಡೆಗೆ ನೀರು ಹರಿಸಿದರೆ, ಮುಂದಿನ ದಿನಗಳಲ್ಲಿ ಬೇಸಿಗೆ ಬೆಳೆ ಹಾಗೂ ಕುಡಿಯುವ ನೀರಿಗೆ ಸಮಸ್ಯೆಯಾಗಲಿದೆ ಎಂದು ಲಿಂಗರಾಜ್ ಹೇಳಿದ್ದಾರೆ.

## ಚನ್ನಗಿರಿ : ಮಹಿಳೆಯ ಮೃತದೇಹ ಪತ್ತೆ

ಚನ್ನಗಿರಿ, ಸೆ. 22 – ತಾಲ್ಲೂಕಿನ ಪಾಂಡೋಮಟ್ಟಿ ಗ್ರಾಮದ ಜಮೀನಿನ ಬಳಿ ಗೌರಮ್ಮ (39) ಎಂಬುವವರ ಮೃತದೇಹ ಪತ್ತೆಯಾಗಿದೆ.

ಜಮೀನಿನ ಬಳಿಯ ಹಳ್ಳದಲ್ಲಿ ಶುಕ್ರವಾರ ಮೃತದೇಹ ಪತ್ತೆಯಾಗಿದೆ. ಈ ಬಗ್ಗೆ ಪೊಲೀಸರು ಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೃತದೇಹದಲ್ಲಿ ಯಾವುದೇ ಗಾಯಗಳಾಗಿಲ್ಲ. ಮರಣೋತ್ತರ ಪರೀಕ್ಷೆಯ ವರದಿ ಇನ್ನೂ ಬರಬೇಕಿದೆ. ಮಹಿಳೆಯ ಪತಿಯೇ ಹತ್ಯೆ ಮಾಡಿರುವುದಾಗಿ ಅವರ ಮನೆಯವರು ದೂರು ದಾಖಲಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 23, 2024



**ಜನ್ಮದಿನದ ಸಂಭ್ರಮ**

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಭಾನುವಾರ ತಮ್ಮ 57ನೇ ಹುಟ್ಟುಹಬ್ಬವನ್ನು ಕುಟುಂಬದ ಸದಸ್ಯರೊಂದಿಗೆ ಕೇಕ್ ಕತ್ತರಿಸುವ ಮೂಲಕ ಆಚರಿಸಿಕೊಂಡರು.

# ರೈತರಿಗೆ ಸಮಗ್ರ ಯೋಜನೆ ಜಾರಿ ತರಲಿದ್ದೇನೆ

**ಜನ್ಮ ದಿನದ ಸಂಭ್ರಮಾಚರಣೆ ಹಾಗೂ ಮತದಾರರಿಗೆ ಕೃತಜ್ಞತಾ ಸಮಾರಂಭದಲ್ಲಿ ಜಿಲ್ಲಾ ಸಚಿವ ಎಸ್ಸೆಸ್ಸೆಂ**

ದಾವಣಗೆರೆ, ಸೆ.22- ಜಿಲ್ಲೆಯ ರೈತರಿಗಾಗಿ ಸಮಗ್ರ ಯೋಜನೆ ಜಾರಿ ತರುವ ಮೂಲಕ ಕೆರೆ-ಕಟ್ಟೆಗಳನ್ನು ತುಂಬಿಸುವ ನೀರಾವರಿ ಯೋಜನೆಗಳನ್ನು ತರಲಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಭರವಸೆ ನೀಡಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಎಸ್.ಎಸ್. ಮಲ್ಲಿಕಾರ್ಜುನ್ ಅವರ 57ನೇ ಜನ್ಮ ದಿನದ ಸಂಭ್ರಮಾಚರಣೆ ಮತ್ತು ಮತದಾರರಿಗೆ ಸಂಸದರಿಂದ ಕೃತಜ್ಞತಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

2ರಿಂದ 3 ವರ್ಷಗಳ ಕಾಲ ಬರಗಾಲ ಬಂದರೂ ರೈತರು ಪರಿತಪಿಸದಂತೆ ಈ ಸಮಗ್ರ ಯೋಜನೆಯು ಕಾಪಾಡಲಿದೆ. ಈ ಬಗ್ಗೆ ಡಿ.ಕೆ ಶಿವಕುಮಾರ್ ಸೇರಿದಂತೆ ಪಕ್ಷದ ಮುಖಂಡರ ಸಮ್ಮುಖದಲ್ಲಿ ಸಭೆ ಮಾಡಿದ್ದೇನೆ ಎಂದು ತಿಳಿಸಿದರು.

ಆನಗೋಡಿನಲ್ಲಿ ರೈತರ ಸ್ಮಾರಕ ಅಭಿವೃದ್ಧಿ ಪಡಿಸಲು ಎಪಿಎಂಸಿ ಯಿಂದ ತುರ್ತಾಗಿ 60ಲಕ್ಷ ರೂ. ಅನುದಾನ ನೀಡಲು ಸೂಚಿಸಿದ್ದೇನೆ ಎಂದು ಹೇಳಿದರು. ಸಾರ್ವಜನಿಕ ಚಿಗಟೇರಿ ಜಿಲ್ಲಾಸ್ಪತ್ರೆಗೆ ನೂತನ ವಾರ್ಡ್ ನಿರ್ಮಿಸಲು (2ನೇ ಪುಟಕ್ಕೆ)

## ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರಾಗಿ ವಿಠಲ್ ಪುನರಾಯ್ಕೆ



ದಾವಣಗೆರೆ, ಸೆ. 22 - ನಗರದ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರಾಗಿ ಮಹಾನಗರ ಪಾಲಿಕೆ ಮಾಜಿ ಮಹಾಪೌರರೂ, ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಮಾಲೀಕರೂ ಆದ ಎಂ.ಎಸ್. ವಿಠಲ್ ಅವರು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಸ್ಥಳೀಯ ದೊಡ್ಡಪೇಟೆಯಲ್ಲಿರುವ ಶ್ರೀ ನಾಮದೇವ ಭಜನಾ (5ನೇ ಪುಟಕ್ಕೆ)

## ಟಿಕೆಟ್ ರಹಿತ ಪ್ರಯಾಣ ತಡೆಗೆ ರೈಲ್ವೆಯಿಂದ ವಿಶೇಷ ಅಭಿಯಾನ

**ಟಿಕೆಟ್ ರಹಿತ ಪೊಲೀಸರೇ ನಿಜವಾದ ಕರಾಳ ಸ್ವಪ್ನ ಎಂದ ಐಆರ್‌ಟಿಸಿಎಸ್‌ಒ**

ನವದೆಹಲಿ, ಸೆ. 22 – ಟಿಕೆಟ್ ರಹಿತ ಪ್ರಯಾಣಕ್ಕೆ ತಡೆ ಹಾಕಲು ಹಬ್ಬದ ದಿನಗಳಲ್ಲಿ ವಿಶೇಷ ಅಭಿಯಾನ ನಡೆಸಲಾಗುವುದು ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಕಳೆದ ಸೆಪ್ಟೆಂಬರ್ 20ರಂದು ರೈಲ್ವೆಯ 17 ವಲಯಗಳ ಪ್ರಧಾನ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದ ರೈಲ್ವೆ ಸಚಿವಾಲಯ, ಅಕ್ಟೋಬರ್ 1ರಿಂದ (5ನೇ ಪುಟಕ್ಕೆ)

# ಹೊಸ ಬಸ್‌ಸ್ಟ್ಯಾಂಡ್‌ಗೆ ಬಸ್

## ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರು: ಎಸ್ಸೆಸ್ಸೆಂ

**ನವೀಕೃತ ಬಸ್ ನಿಲ್ದಾಣದಿಂದ ವಾಹನಗಳ ಕಾರ್ಯಾಚರಣೆಗೆ ಚಾಲನೆ**

ದಾವಣಗೆರೆ, ಸೆ. 22 – ನಗರದ ಕೆ.ಎಸ್.ಆರ್.ಟಿ.ಸಿ. ನವೀಕೃತ ಬಸ್ ನಿಲ್ದಾಣಕ್ಕೆ ಕಮ್ಯುನಿಸ್ಟ್ ನಾಯಕ ಪಂಪಾ ಪತಿ ಅವರ ಹೆಸರಿಡುವ ಬಗ್ಗೆ ಸೂಚನೆ ನೀಡಿರುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ನವೀಕೃತ ಬಸ್ ನಿಲ್ದಾಣದಿಂದ ವಾಹನಗಳ ಕಾರ್ಯಾಚರಣೆ ಹಾಗೂ ನೂತನ ಮಾರ್ಗಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

1985ರಲ್ಲಿ ಪಂಪಾಪತಿ ಅವರು ಈ ಬಸ್ ನಿಲ್ದಾಣ ಸ್ಥಾಪನೆಗೆ ಆಮರಣಾಂತ ಉಪವಾಸ ಮಾಡಿದ್ದರು. ಬಸ್ ನಿಲ್ದಾಣ ಹಾಗೂ ಬಸ್ ಡಿಪೋ ಸ್ಥಾಪನೆಯಾಗಲು ಅವರೇ ಮೂಲ ಕಾರಣೀಭೂತರು. ಅವರ ಹೆಸರನ್ನು ಬಸ್ ನಿಲ್ದಾಣಕ್ಕೆ ಇಡುವಂತೆ ಹಲವು ಸಂಘ ಸಂಸ್ಥೆಗಳು ಒತ್ತಾಯಿಸಿವೆ. ಈ ಬಗ್ಗೆ ನಾನು ಪಾಲಿಕೆಯ ಮೇಯರ್ ಹಾಗೂ ಪಾಲಿಕೆ ಸದಸ್ಯರಿಗೆ ಈಗಾಗಲೇ ಸೂಚನೆ ನೀಡಿ ದ್ದೇನೆ ಎಂದು ಸಚಿವರು ಹೇಳಿದರು.

ಸಿದ್ದರಾಮಯ್ಯ ನೇತೃತ್ವದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಗಿದೆ. ಬಡವರಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಇನ್ನೂ ಹೆಚ್ಚು ಕಾಮಗಾರಿಗಳನ್ನು ಆರಂಭಿಸಬೇಕಿದೆ. ನನ್ನ ಮನಸ್ಸು ಒಪ್ಪುವಷ್ಟು ಕಾಮಗಾರಿ ಆಗಿಲ್ಲ. ಇನ್ನೂ ಹೆಚ್ಚು ಸುಂದರ ನಗರ ಮಾಡಲು ಕ್ರಮಗಳನ್ನು ತೆಗೆದುಕೊಳ್ಳ (5ನೇ ಪುಟಕ್ಕೆ)



### ಬಿಜೆಪಿಯವರಿಗೆ ಹಣದ ಬಳಕೆ ಗೊತ್ತಿಲ್ಲ

**ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನವೀಕರಣಕ್ಕೆ ಸ್ಮಾರ್ಟ್ ಸಿಟಿ ಹಣ ಪಡೆಯುವ ಅಗತ್ಯವಿರಲಿಲ್ಲ. ಸರ್ಕಾರದಿಂದಲೇ ಹಣ ಪಡೆಯಬಹುದಿತ್ತು. ಸ್ಮಾರ್ಟ್ ಸಿಟಿ ಹಣವನ್ನು ನಗರದ ಬೇರೆ ಅಭಿವೃದ್ಧಿ ಯೋಜನೆಗಳಿಗೆ ಬಳಸಬಹುದಿತ್ತು. ಆದರೆ, ಬಸ್ ನಿಲ್ದಾಣಕ್ಕೆ ಸ್ಮಾರ್ಟ್ ಸಿಟಿ ಹಣ ಬಳಕೆ ಮಾಡಿದ ಬಿಜೆಪಿಯವರು** (5ನೇ ಪುಟಕ್ಕೆ)

## ಪ್ರಚೋದನಕಾರಿ ಹೇಳಿಕೆ : ಇಬ್ಬರ ಬಂಧನ

ದಾವಣಗೆರೆ, ಸೆ. 22 – ಪ್ರಚೋದನಕಾರಿ ಭಾಷಣ ಹಾಗೂ ಹೇಳಿಕೆ ನೀಡಿದ ಆರೋಪದ ಮೇಲೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಪ್ರಚೋದನಕಾರಿ ಹೇಳಿಕೆಗಳ ನಂತರ ನಗರದ ಬೇತೂರು ರಸ್ತೆಯಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ನಡೆದಿತ್ತು.

ಪ್ರಚೋದನಾಕಾರಿ ಭಾಷಣ ಮಾಡಿದ್ದ (5ನೇ ಪುಟಕ್ಕೆ)




**12ನೇ ವರ್ಷದ ಪುಣ್ಯಸ್ಮರಣೆ**

**ದಿ|| ಶ್ರೀಮತಿ ದೊಗ್ಗಳ್ಳಿ ನಾಗರತ್ನಮ್ಮ**

ನಿಧನ : 23.09.2012

*ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ.*

ದಿ|| ದೊಗ್ಗಳ್ಳಿ ಜಯಣ್ಣನವರ ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ಬಂಧು-ಮಿತ್ರರು ಹಾಗೂ ದೊಗ್ಗಳ್ಳಿ ವಂಶಸ್ಥರು.

ಅತ್ಯಾಧುನಿಕವಾಗಿ ನವೀಕೃತಗೊಂಡಿರುವ ಎಸ್. ನಿಜಲಿಂಗಪ್ಪ ಬಡಾವಣೆಯ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ
ಕಲ್ಯಾಣ ಮಂಟಪದ ಪ್ರಾರಂಭೋತ್ಸವ



ಹವಾ ನಿಯಂತ್ರಣ ವ್ಯವಸ್ಥೆ ಮತ್ತು ಅತ್ಯಾಧುನಿಕ ಶೈಲಿಯ ಆಕರ್ಷಕ ಒಳಾಂಗಣ ವಿನ್ಯಾಸ ಸೇರಿದಂತೆ ಹಲವು ವೈಶಿಷ್ಟ್ಯಗಳೊಂದಿಗೆ ನವೀಕೃತಗೊಂಡಿರುವ
ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪದ ಪ್ರಾರಂಭೋತ್ಸವವನ್ನು
ಶ್ರೀ ಮಹಾಗಣಪತಿ, ಶ್ರೀ ಮಹಾಲಕ್ಷ್ಮಿ, ಶ್ರೀ ಮಹಾಸರಸ್ವತಿ ಪೂಜೆ ಮತ್ತು ವಾಸ್ತು ಶಾಂತಿ ಪೂಜೆಯೊಂದಿಗೆ
ದಿನಾಂಕ 23.09.2024ನೇ ಸೋಮವಾರ ನೆರವೇರಿಸಲಾಗುವುದು.





ನವೀಕೃತ ಕಲ್ಯಾಣ ಮಂಟಪದ ಪ್ರಾರಂಭೋತ್ಸವಕ್ಕೆ ಹಾರ್ದಿಕ ಶುಭಾಶಯಗಳು :

- ಎಸ್.ಬಿ. ಪಾಟೀಲ್, ಇಂಜಿನಿಯರ್
- ಪ್ರವೀಣ್ ಮುಂಡಾಸ್, ಇಂಜಿನಿಯರ್,
- ಪ್ರತೀಕ್ ಕನ್ಸಲ್ಟೆನ್ಸಿ ಸರ್ವೀಸಸ್
- ಕೆ.ಬಿ. ಬಸವರಾಜ್, ಪ್ಲಂಬರ್
- ರಫೀಕ್, ಮೇಸ್ತ್ರಿ
- ವೆಂಕಟೇಶ್, ಎಲೆಕ್ಟ್ರೀಷಿಯನ್
- ಪುಷ್ಪೇಂದ್ರ, ಟೈಲ್ಸ್ ◆ ದೇವಿಲಾಲ್, ಕಾರ್ಪೆಂಟರ್
- ರುದ್ರೇಶ್, ಪೇಂಟರ್
- ಷಂಫುದ್ದೀನ್, ವರ್ಕ್‌ಶಾಪ್
- ಜಗದೇವ್ ಪ್ರಸಾದ್, ವಾಲ್ ಸೀಲಿಂಗ್
- ವೀರೇಶ್, ಮೆಟೀರಿಯಲ್ ಸಪ್ಲೈಯರ್ಸ್
- ಉಮೇಶ್, ಎಲೆಕ್ಟ್ರಿಕ್ ಕಾಂಟ್ರ್ಯಾಕ್ಟರ್
- ಸಿದ್ಧಾರ್ಥ್, ಎಲೆಕ್ಟ್ರಿಕ್ ಕಾಂಟ್ರ್ಯಾಕ್ಟರ್
- ಬ್ಲೂಲೈನ್ ಎಂಟರ್‌ಪ್ರೈಸಸ್, ದಾವಣಗೆರೆ.
- ಮಾಗನೂರು ಎಂಟರ್‌ಪ್ರೈಸಸ್, ದಾವಣಗೆರೆ
- ಮುದ್ದಳ್ಳಿ ಉಮೇಶ್ ಎಂಟರ್‌ಪ್ರೈಸಸ್, ದಾವಣಗೆರೆ.
- ಜ್ಯೋತಿ ಎಲೆಕ್ಟ್ರಿಕಲ್ಸ್, ದಾವಣಗೆರೆ.
- ಶ್ರೀ ಬಕ್ಕೇಶ್ವರ ಟ್ರೇಡರ್ಸ್, ದಾವಣಗೆರೆ.
- ಮುದ್ದಳ್ಳಿ ಗಂಗಾ ಮಾರ್ಕೆಟಿಂಗ್, ದಾವಣಗೆರೆ
- ಎವಿಎಂ ಗ್ರಾನೈಟ್ಸ್, ಹುಬ್ಬಳ್ಳಿ
- ಅಮೋಘ್ ಎಂಟರ್‌ಪ್ರೈಸಸ್, ಹುಬ್ಬಳ್ಳಿ
- ಸ್ಟೋನ್ಸ್, ದಾವಣಗೆರೆ
- ಆದಿತ್ಯ ಅಲ್ಯುಮೀನಿಯಂ, ದಾವಣಗೆರೆ.
- ಆರ್ಕೋ ಲೈಟ್ಸ್, ದಾವಣಗೆರೆ
- ಗೇಜ್ 16, ಬೆಂಗಳೂರು
- ಸ್ವಾನ್‌ಹೌಸ್ ಇಂಟೀರಿಯರ್ಸ್, ದೆಹಲಿ
- ರಿಪ್ಪಲ್ ರೇ ಇನ್‌ಕಾರ್ಪೋರೇಷನ್, ದಾವಣಗೆರೆ.

## ವೊಡಫೋನ್ ಐಡಿಯಾದಿಂದ 30 ಸಾವಿರ ಕೋಟಿ ಉಪಕರಣಗಳ ಖರೀದಿ


ನವದೆಹಲಿ, ಸೆ. 22 – ನೋಕಿಯಾ, ಎರಿಕ್‌ಸನ್ ಹಾಗೂ ಸ್ಯಾಮ್‌ಸಂಗ್‌ಗಳಿಂದ 30 ಸಾವಿರ ಕೋಟಿ ರೂ. ಮೌಲ್ಯದ 4ಜಿ ಹಾಗೂ 5 ಜಿ ನೆಟ್‌ವರ್ಕ್ ಉಪಕರಣಗಳ ಖರೀದಿಗೆ ಗುತ್ತಿಗೆ ನೀಡಿರುವುದಾಗಿ ವೊಡಫೋನ್ ಐಡಿಯಾ ತಿಳಿಸಿದೆ.

ಈ ವರ್ಷ ಭಾರತೀಯ ಟೆಲಿಕಾಂ ಕಂಪನಿಯೊಂದು ನೀಡಿರುವ ಅತಿ ದೊಡ್ಡ ಖರೀದಿ ಆದೇಶ ಇದಾಗಿದೆ.

4ಜಿ ಸೇವೆಯ ವಿಸ್ತರಣೆಗೆ ಅತಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕಂಪನಿಯು ಎರಡನೇ ಸುತ್ತಿನ ಹೂಡಿಕೆ ಆರಂಭಿಸಿದೆ ಎಂದು ವೊಡಫೋನ್ ಐಡಿಯಾ ಕಂಪನಿಯ ಸಿಇಒ ಅಕ್ಷಯ ಮೂಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ

ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ



ಸಮೀಪದ ಕೋಡಿಯಾಲ-ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.




# ಕಲೆ ಜನಪರವಾಗಿರಲಿ, ಮಕ್ಕಳಲ್ಲಿ ಕಲೆ ಅಭಿರುಚಿ ಬೆಳೆಸಿ

**ಕಲಾ ಶಾಲೆಯ ವಜ್ರ ಮಹೋತ್ಸವ ಸಮಾರೋಪದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್**

ದಾವಣಗೆರೆ, ಸೆ. 22- ಚಿತ್ರಕಲೆ ಜನಪರವಾಗಿರಲಿ. ಕಲಾವಿದರು ಚಿತ್ರಕಲೆ ಮೂಲಕ ನೇರವಾಗಿ ಜನರನ್ನು ತಲುಪಬೇಕಾಗಿದೆ. ಮಕ್ಕಳಲ್ಲಿಯೂ ಕಲೆಯ ಅಭಿರುಚಿ ಬೆಳೆಸಬೇಕಾದ ಅವಶ್ಯವಿದೆ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಹೇಳಿದರು.

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ಎರಡು ದಿನಗಳ ಕಾಲ ನಡೆದ ದಾವಣಗೆರೆ ಕಲಾ ಶಾಲೆಯ ವಜ್ರ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದರು.

ಇತರೆ ಕಲಾವಿದರಿಗೆ ಇರುವ ಗಟ್ಟಿಧ್ವನಿ, ಗಡಸುತನ ಚಿತ್ರಕಲಾವಿದರಲ್ಲಿ ಇಲ್ಲದಿರುವುದು ವಿಷಾದದ ಸಂಗತಿಯಾಗಿದೆ. ನಾಡಿನ ಏನೆ ಗಂಭೀರ ಮತ್ತು ಜನಪರ ಸಮಸ್ಯೆಗಳ ಬಗ್ಗೆ ಕಲಾವಿದರೂ ಧ್ವನಿ ಎತ್ತಬೇಕಾಗುತ್ತದೆ ಎಂದರು.

ಸಾಹಿತಿಗಳು, ಲೇಖಕರು, ಬರಹಗಾರರು ತಮ್ಮ ಲೇಖನ, ಪದ್ಯ, ಅಂಕಣಗಳ ಮೂಲಕ ಜನಪರವಾಗಿ ಇರುವುದನ್ನು ತೋರಿಸಿಕೊಡುತ್ತಾರೆ.ಹಾಗೆಯೇ ಚಿತ್ರಕಲಾವಿದರು ಕೂಡ ತಮ್ಮ ಕಲೆಯನ್ನು ಜನಪರವನ್ನಾಗಿಸಿ, ಜನರನ್ನು ನೇರವಾಗಿ ತಲುಪುವಂತೆ ಮಾಡಬೇಕಾಗಿದೆ ಎಂದು ಹೇಳಿದರು.

ಲಲಿತಕಲಾ ಕಾಲೇಜುಗಳು ಸಹ ಆಧುನಿಕತೆಗೆ ತಕ್ಕಂತೆ ಬದಲಾಗಬೇಕಾಗಿದೆ. ತನ್ಮೂಲಕ ಕಲಾವಿದರು ಒಟ್ಟುಧ್ವನಿ ಎತ್ತಿದಾಗ ಮಾತ್ರ ಕಲಾವಿದರ ಅಸ್ತಿತ್ವ ಗೊತ್ತಾಗುತ್ತದೆ. ಎಲ್ಲಾ ಕಲಾವಿದರು ಸಂಘಟಿತರಾಗಿ ಬಂದಾಗ ಅಕಾಡೆಮಿ ಇನ್ನಷ್ಟು ಬಲಗೊಳ್ಳುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್ ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಳನ ಮಾದರಿಯಲ್ಲಿ 'ಚಿತ್ರಕಲಾ ಸಮ್ಮೇಳನ' ನಡೆಸಬೇಕು ಮತ್ತು ನಾಡಿನ ಲಲಿತಕಲಾ ಮಹಾವಿದ್ಯಾಲಯಗಳನ್ನು ಲಲಿತಕಲಾ ಅಕಾಡೆಮಿಗೆ ಆಯ್ಕೆ ಮಾಡುವ ಮೂಲಕ ವರ್ಷದ ಉತ್ತಮ ಕಾಲೇಜು ಎಂದು ಗೌರವಿಸಬೇಕು ಎಂಬ ಇಂಗಿತ ವ್ಯಕ್ತಪಡಿಸಿದರು.

ನಾವು ನೋಡುವ ದೃಷ್ಟಿಕೋನ ಮೊದಲು ಸರಿ ಇರಬೇಕು. ಯಾವುದನ್ನೇ ಆಗಲಿ ಸಕಾರಾತ್ಮಕ ಮನೋಭಾವದಿಂದ ನೋಡಬೇಕಾಗುತ್ತದೆ. ಆಧುನಿಕತೆಯ ಬದಲಾದ ವ್ಯವಸ್ಥೆಗೆ ಅನುಗುಣವಾಗಿ ನಾವು ಬದಲಾಗಬೇಕಾದ ಅನಿವಾರ್ಯತೆ ಇದೆ. ಎಲ್ಲಾ ಕಲಾ ಶಾಲೆಗಳಿಗಿಂತ ಮಾದರಿ ಶಾಲೆಯನ್ನಾಗಿ ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯವನ್ನು ಮಾಡಬೇಕಾಗಿದೆ. ಇದಕ್ಕೆ ಹಳೆ ವಿದ್ಯಾರ್ಥಿಗಳು, ನಿವೃತ್ತ ಪ್ರಾಧ್ಯಾಪಕರು ಹಾಗೂ ಹಾಲಿ ವಿದ್ಯಾರ್ಥಿಗಳ ಸಹಕಾರ ಅತ್ಯಗತ್ಯ ಎಂದರು.

ಅಧ್ಯಕ್ಷರು ಮತ್ತು ವಜ್ರಮಹೋತ್ಸವ ಸಮಿತಿ ಸದಸ್ಯರಾದ ಚಿ.ಸು. ಕೃಷ್ಣಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ವೇಳೆ ನಿವೃತ್ತ ಪ್ರಾಧ್ಯಾಪಕರಾದ ಎಲ್.ಕೆ. ಹನುಮಂತಾಚಾರ್, ಜಿ.ಹೆಚ್.ಸೂಗೂರು, ಬಿ. ಸೋಮಶೇಖರಪ್ಪ ಅವರನ್ನು ಸಮಿತಿ ವತಿಯಿಂದ ಗೌರವಿಸಲಾಯಿತು.

ಕೀರ್ತನಾ, ಜಯಲಕ್ಷ್ಮಿ, ಅರುಣ್ ಕುಮಾರ್ ಹಾಗೂ ವಿನಯ್ ಕುಮಾರ್ ಈ ನಾಲ್ವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಗಣಪತಿ ಎಸ್.ಹೆಗಡೆ, ಸುರೇಶ್ ಎಸ್. ವಾಘ್ಮೋರೆ, ಗೋಪಾಲಕೃಷ್ಣ ಮನುವಾಚಾರ್ಯ, ಸತೀಶ್, ದತ್ತಾತ್ರೇಯ ಭಟ್, ಮಹಾಂತೇಶ ಹರ್ತಿ, ಸುನೀಲ್ ಮಳಗಿ, ನಾಗಪತಿ ಭಟ್, ಕೆ.ಎಂ. ಶೇಷಗಿರಿ, ಗಣೇಶ್ ಧಾರೇಶ್ವರ, ಶೀಲವಂತ ಯಾದಗಿರಿ ಮುಂತಾದವರಿದ್ದರು.

## ಸರ್ಕಾರದ ನಿಯಂತ್ರಣದಿಂದ ದೇವಾಲಯಗಳನ್ನು ಮುಕ್ತಗೊಳಿಸುವ ಬಗ್ಗೆ ವಿಹೆಚ್‌ಪಿ ಚರ್ಚೆ

ನವದೆಹಲಿ, ಸೆ. 22 – ವಿಶ್ವ ಹಿಂದೂ ಪರಿಷತ್‌ನ ಉನ್ನತ ಪದಾಧಿಕಾರಿಗಳ ಸಭೆಯಲ್ಲಿ ತಿರುಪತಿ ತಿಮ್ಮಪ್ಪನ ದೇವಾಲಯದ ಲಡ್ಡೂ ವಿವಾದ ಹಾಗೂ ದೇಶಾದ್ಯಂತ ಇರುವ ದೇವಾಲಯಗಳನ್ನು ಸರ್ಕಾರಗಳ ನಿಯಂತ್ರಣದಿಂದ ಮುಕ್ತಗೊಳಿಸುವ ಬೇಡಿಕೆಯ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಗುವುದು..

ಸೋಮವಾರ ವಿಶ್ವ ಹಿಂದೂ ಪರಿಷತ್‌ನ ಕೇಂದ್ರೀಯ ಮಾರ್ಗದರ್ಶಕ ಮಂಡಳಿಯ ಸಭೆ ತಿರುಪತಿಯಲ್ಲಿ ನಡೆಯಲಿದೆ. ಧಾರ್ಮಿಕ ಮತಾಂತರದ ಬಗ್ಗೆಯೂ ಪ್ರಮುಖವಾಗಿ ಚರ್ಚಿಸಲಾಗುವುದು ಎಂದು ಸಂಘಟನೆಯ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಭೆಯಲ್ಲಿ ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಇತರೆ ದಕ್ಷಿಣದ ರಾಜ್ಯಗಳ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ.

ಪ್ರಸಕ್ತ 4 ಲಕ್ಷಕ್ಕೂ ಹೆಚ್ಚು ದೇವಾಲಯಗಳು ದೇಶಾದ್ಯಂತ ಸರ್ಕಾರದ ನಿಯಂತ್ರಣದಲ್ಲಿವೆ. ಇವುಗಳ ನಿರ್ವಹಣೆಯನ್ನು ಹಿಂದೂ ಸಮಾಜಕ್ಕೆ ವಹಿಸಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿದೆ ಎಂದು ವಿ.ಹೆಚ್.ಪಿ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಭಜರಂಗ್ ಬಾಗ್ಡ ಹೇಳಿದ್ದಾರೆ.

ತಿರುಪತಿ ಲಡ್ಡುವಿನಲ್ಲಿ ಪ್ರಾಣಿಯ ಕೊಬ್ಬು ಬಳಸಲಾಗಿತ್ತು ಎಂಬುದನ್ನು ಸಹಿಸಲಾಗದು. ದೇವಾಲಯದ ನಿಯಂತ್ರಣವನ್ನು ಹಿಂದೂ ಸಮಾಜಕ್ಕೆ ವಹಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಶುಕ್ರವಾರ ಹೇಳಿತ್ತು.

## ಇರಾನ್ : ಗಣಿ ಸ್ಫೋಟದಲ್ಲಿ 30 ಸಾವು

ತೆಹ್ರಾನ್, ಸೆ. 22 – ಪೂರ್ವ ಇರಾನ್‌ನ ಕಲ್ಲಿದ್ದಲು ಗಣಿಯಲ್ಲಿ ಮಿಥೇನ್ ಸೋರಿಕೆಯಿಂದ ಉಂಟಾದ ಸ್ಫೋಟದಲ್ಲಿ ಕನಿಷ್ಠ 30 ಜನ ಸಾವನ್ನಪ್ಪಿದ್ದಾರೆ ಹಾಗೂ ಇತರೆ 17 ಜನ ಗಾಯಗೊಂಡಿದ್ದಾರೆ. ಇನ್ನೂ 24 ಗಣಿ ಕಾರ್ಮಿಕರು ಅವಶೇಷಗಳಡಿಯಲ್ಲಿ ಸಿಲುಕಿದ್ದಾರೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ತಬಸ್ ಎಂಬಲ್ಲಿನ ಕಲ್ಲಿದ್ದಲು ಗಣಿಯಲ್ಲಿ ಈ ಅವಘಡ ನಡೆದಿದೆ. ತುರ್ತು ನೆರವು ಸಿಬ್ಬಂದಿಯನ್ನು ಸ್ಥಳಕ್ಕೆ ರವಾನಿಸಲಾಗಿದೆ. ಸ್ಫೋಟ ಸಂಭವಿಸಿದ ಸಂದರ್ಭದಲ್ಲಿ ಅಲ್ಲಿ 70 ಜನ ಕಾರ್ಯನಿರ್ವಹಿಸುತ್ತಿದ್ದರು.

## 13 ರಾಜ್ಯಗಳಲ್ಲಿ ಶೇ.97.7ರಷ್ಟು ಎಸ್‌ಸಿ ದೌರ್ಜನ್ಯ ಪ್ರಕರಣಗಳು

ನವದೆಹಲಿ, ಸೆ. 22 – ಪರಿಶಿಷ್ಟ ಜಾತಿಯವರ ಮೇಲಿನ ಶೇ.97.7ರಷ್ಟು ದೌರ್ಜನ್ಯ ಪ್ರಕರಣಗಳು 13 ರಾಜ್ಯಗಳಲ್ಲಿ ವರದಿಯಾಗಿವೆ ಎಂದು ಸರ್ಕಾರದ ಇತ್ತೀಚಿನ ಮಾಹಿತಿ ತಿಳಿಸಿದೆ.

2022ರಲ್ಲಿ ದಾಖಲಾದ ಪ್ರಕರಣಗಳ ವಿಶ್ಲೇಷಣೆ ಮಾಡಿ ಈ ವರದಿ ರೂಪಿಸಲಾಗಿದೆ. ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯದ ಶೇ.98.91ರಷ್ಟು ಪ್ರಕರಣಗಳು 13 ರಾಜ್ಯಗಳಲ್ಲೇ ಕೇಂದ್ರೀಕೃತವಾಗಿವೆ.

2022ರಲ್ಲಿ ಪರಿಶಿಷ್ಟ ಜಾತಿಯವರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 51,656 ಪ್ರಕರಣಗಳು ದಾಖಲಾಗಿದ್ದವು. ಇದರಲ್ಲಿ ಉತ್ತರ ಪ್ರದೇಶದಲ್ಲಿ 12,287, ರಾಜಸ್ಥಾನದಲ್ಲಿ 8,651 ಹಾಗೂ ಮಧ್ಯಪ್ರದೇಶದಲ್ಲಿ 7,732 ಪ್ರಕರಣಗಳು ದಾಖಲಾಗಿದ್ದವು.

ಬಿಹಾರದಲ್ಲಿ 6,799, ಒಡಿಶಾದಲ್ಲಿ 3,576 ಹಾಗೂ ಮಹಾರಾಷ್ಟ್ರದಲ್ಲಿ 2,706 ಪ್ರಕರಣಗಳು ದಾಖಲಾಗಿದ್ದವು. ಈ ಆರು ರಾಜ್ಯಗಳಲ್ಲೇ ಶೇ.81ರಷ್ಟು ಪ್ರಕರಣಗಳು ಕೇಂದ್ರೀಕೃತವಾಗಿವೆ.

ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 9,735 ಪ್ರಕರಣಗಳನ್ನು ದಾಖಲಿಸಲಾಗಿದೆ. ಮಧ್ಯ ಪ್ರದೇಶದಲ್ಲಿ ಅತಿ ಹೆಚ್ಚಿನ 2,979 ಪ್ರಕರಣಗಳನ್ನು ದಾಖಲಿಸಲಾಗಿದೆ.

ರಾಜಸ್ಥಾನದಲ್ಲಿ 2,498 ಹಾಗೂ ಒಡಿಶಾದಲ್ಲಿ 773 ಪ್ರಕರಣಗಳನ್ನು ದಾಖಲಿಸಲಾಗಿದೆ. ಉಳಿದಂತೆ ಮಹಾರಾಷ್ಟ್ರದಲ್ಲಿ 691 ಹಾಗೂ ಆಂಧ್ರ ಪ್ರದೇಶದಲ್ಲಿ 499 ಪ್ರಕರಣಗಳನ್ನು ದಾಖಲಿಸಲಾಗಿದೆ. ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣವೂ ಇಳಿಕೆಯಾಗಿದೆ. 2020ರಲ್ಲಿ ಶಿಕ್ಷೆಯಾಗುವ ಪ್ರಮಾಣ ಶೇ.39.2ರಷ್ಟಿತ್ತು. ಅದು 2022ರ ವೇಳೆಗೆ ಶೇ.32.4ಕ್ಕೆ ಇಳಿಕೆಯಾಗಿದೆ ಎಂದೂ ವರದಿ ತಿಳಿಸಿದೆ.

## ರಾಜ್ಯ ಮಟ್ಟದ 3X3 ಬಾಸ್ಕೆಟ್ ಬಾಲ್ ಪಂದ್ಯಾವಳಿ



ದಾವಣಗೆರೆ, ಸೆ. 22 - ನಗರದ ಬಾಸ್ಕೆಟ್ ಬಾಲ್ ಕ್ಲಬ್ ಇವರ ಆಶಯದಲ್ಲಿ ಸನ್ಮಾನ್ಯ ಎಸ್. ಎಸ್. ಮಲ್ಲಿಕಾರ್ಜುನ್ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ 3X3 ಬಾಸ್ಕೆಟ್ ಬಾಲ್ ಪಂದ್ಯಾವಳಿಗಳು.

ಉದ್ಘಾಟನೆ ಕಾರ್ಯಕ್ರಮವನ್ನು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ನೆರವೇರಿಸಿದ್ದಾರೆ.

ಕಾರ್ಯಕ್ರಮದಲ್ಲಿ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್ ಗೌರವ ಅಧ್ಯಕ್ಷ ರಾಮಮೂರ್ತಿ, ಅಧ್ಯಕ್ಷ ಕಿರಣ್ ಕುಮಾರ್, ಉಪಾಧ್ಯಕ್ಷ ಗಡಿಗುಡಾಳ್ ಮಂಜುನಾಥ್, ವಿಜಯ್ ಕುಮಾರ್, ಕಾರ್ಯದರ್ಶಿ ಆರ್. ವೀರೇಶ್, ಸಹ ಕಾರ್ಯದರ್ಶಿ ಉದಯ್, ಖಜಾಂಚಿ ಪ್ರಸನ್ನ, ತರಬೇತುದಾರರು ದರ್ಶನ್ ಮತ್ತು ಸಚಿನ್ ಹಾಗೂ ಇತರರು ಭಾಗವಹಿಸಿದ್ದರು.


**ಸೈಟ್, ಮನೆ, ಜಮೀನು ಅರ್ಧ (1/2%) ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ, ಬಂಧು-ಬಳಗದವರಿಗೆ ತಿಳಿಸಿರಿ)

**ಹೊಲ ಮಾರಾಟಕ್ಕಿದೆ**
KHB ಹತ್ತಿರ ಸತ್ಯನಾರಾಯಣ ಕ್ಯಾಂಪಿಗೆ ಹತ್ತಿರ ಒಂದು ಎಕರೆ ಹೊಲ, ಎರಡು ಬೋರ್ ಇದೆ. ಕಾರ್ನರ್ ಇದೆ.
Rate - 1 ಕೋಟಿ 32 ಲಕ್ಷಕ್ಕೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆ ಮತ್ತು ಲೀಸ್‌ಗೆ ದೊರೆಯುತ್ತವೆ. ವಿಚಾರಿಸಿ**
ಆಂಜನೇಯ ಬಡಾವಣೆಯಲ್ಲಿ 2 ಬೆಡ್ ರೂಮ್ ಇಂಡಿಪೆಂಡೆಂಟ್ ಹೌಸ್ ಹೊಸ ಮನೆ ಲೀಸ್‌ಗೆ ಇದೆ. ನಾಲ್ಕು ಬೆಡ್ ರೂಮ್ ಹೊಸ ಮನೆ ಬಾಡಿಗೆ 30 ಸಾವಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
96061 26471

**ಸೈಟು ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಬಿ ಬ್ಲಾಕ್, 2ನೇಯ ಮುಖ್ಯರಸ್ತೆ, ಕುಂದುವಾಡ ಕೆರೆ ಪೂರ್ವ ದಿಕ್ಕಿನ ಗೇಟ್ ಪಕ್ಕದಲ್ಲಿ 40+49+30 / 2 (1580 ಅಡಿ) ಲೇಕ್‌ವ್ಯೂ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
98440 12530

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ತೋಟ ಮಾರಾಟಕ್ಕಿದೆ**
ತೆಂಗಿನ ತೋಟ, State Highway Attach Davanagere - Channagiri road 1 Acre 10 Gunte
88612 84178

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಫೋಟೋ ಸ್ಟುಡಿಯೋದಲ್ಲಿ ಫೋಟೋಶಾಪ್ ಮತ್ತು ಕೊರಲ್ ಡ್ರಾ ನುರಿತ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ.
ಅತ್ತಿಗೆರೆ ಡಿಜಿಟಲ್ ಸ್ಟುಡಿಯೋ
ನೂತನ ಕಾಲೇಜು ರಸ್ತೆ, ದಾವಣಗೆರೆ
94815 25786, 94813 43464

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ (Ladies & Gents)
ಸಿಲಿಂಡರ್ ಡೆಲಿವರ್ ಬಾಯ್
98441 14143
ಕರೆ ಮಾಡುವ ಸಮಯ : ಬೆಳಿಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ.

**SITES FOR SALE**
1. Behind Sir MV college, 30x40-North.
2. Near Kalachari layout, 30x40-North.
3. Near Manjunatha layout, 30x50-East, West.
76768 74456

**ಮನೆ ಲೀಸ್‌ಗೆ ಇದೆ**
'ಎ' ಬ್ಲಾಕ್ ಮೂರನೇ ಕ್ರಾಸ್, ಕೋರ್ಟ್ ಹಿಂಭಾಗ, ದೇವರಾಜ್ ಅರಸ್ ಬಡಾವಣೆ, 2 ಬೆಡ್ ರೂಮ್, 2ನೇ ಫ್ಲೋರ್, ಸಸ್ಯಹಾರಿಗಳಿಗೆ ಮಾತ್ರ.
74111 56285, 81055 57433

**ಮಳಿಗೆ ಬಾಡಿಗೆಗೆ**
ಅರುಣ ಟಾಕೀಸ್ ಹತ್ತಿರ, ಪಿಸಾಳೆ ಕೌಂಪೌಂಡ್, 3ನೇ ಕ್ರಾಸ್, ಹಳೆ ಪಿ.ಬಿ. ರಸ್ತೆಗೆ ಅಭಿಮುಖವಾಗಿ 9.5x30 ಅಳತೆಯ ಮಳಿಗೆ ಬಾಡಿಗೆಗೆ ಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ :
97407 70399, 80739 12767

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

**ಮತ್ಸ್ಯದ ಮನೆ**
ಮನೆಯಲ್ಲಿ ಬಾಳೆ ಎಲೆ ಮೀನಿನ ಊಟ.
95133 14666
ಪಿಸಾಳೆ ಕಾಪೌಂಡ್, ದಾವಣಗೆರೆ

**WANTED**
Helpers Required Ladies / Gents. Qualification SSLC Pass / Fail. Addres : Cindrella Chocolates Vidyanagar 1st Bus stop near Coffe day Dvg-577004
63603 34198

**ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್ ನಲ್ಲಿ ಎಂ.ಎಸ್. ಆಫೀಸ್ ಅನುಭವವುಳ್ಳವರು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಫೋಟೋಶಾಪ್ ನವರು ಸಹ ಬೇಕಾಗಿದ್ದಾರೆ. ಸಂಪರ್ಕಿಸಿ: ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ) ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪಕ್ಕ, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ 577001
94483 38657

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಶಿರಮಗೊಂಡನಹಳ್ಳಿಯಲ್ಲಿ ಪೂರ್ವ/ಪಶ್ಚಿಮ ದಿಕ್ಕಿನ 30x50 ಅಳತೆಯ ನಿವೇಶನಗಳು ಹಾಗೂ ಸರಸ್ವತಿ ನಗರ 'ಸಿ' ಬ್ಲಾಕ್‌ನಲ್ಲಿ ದಕ್ಷಿಣ ದಿಕ್ಕಿನ 40x60 ನಿವೇಶನ, ಹರಿಹರದ ಪಿಬಿ ರಸ್ತೆ, ಅನ್ನಪೂರ್ಣೇಶ್ವರಿ ಲೇಔಟ್‌ನಲ್ಲಿ ಪೂರ್ವ/ಉತ್ತರ ದಿಕ್ಕಿನ ಸೈಟ್‌ಗಳು ಮಾರಾಟಕ್ಕಿವೆ :
95388 34999

**3BHK / 2 BHK ಮನೆ ಬಾಡಿಗೆಗಿದೆ**
ವಾಸ್ತು ಪ್ರಕಾರದ, ಪೂರ್ವ-ಮುಖಿಯ, ಸ್ವತಂತ್ರವಾದ ಮನೆ: ಸಸ್ಯಾಹಾರಿಗಳ ವಾಸಕ್ಕೆ..ವಿದ್ಯಾರ್ಥಿಗಳಿಗೆ, ಮೆಸ್, ಪಿಜಿ ಸೆಂಟರ್, ಮಕ್ಕಳ ಶಾಲೆ, ಕಛೇರಿ, ಸಂಗೀತ - ನರ್ತನ ಶಾಲೆ, ವ್ಯಾಯಾಮ ಶಾಲೆ (Gym), ಆಶ್ರಮ ಹಾಗೂ ಇತರೇ ಉದ್ದೇಶಗಳಿಗೆ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended M.C.C. 'B' Block. Preference to Students (Ladies).
63015 58346

**PHOTOSHOP, TALLY TRADING CLASS**
Office Time : 8Am to 8Pm
Classic Computer Education
97426 10385, 91081 85926

**ಎಸ್ ಜಿ ಕೆ ಸಪ್ಲೈಯರ್**
ನಮ್ಮಲ್ಲಿ ಟ್ಯಾಂಕರ್ ನೀರು ಮತ್ತು ಕಟ್ಟಡಗಳಿಗೆ ಬೇಕಾಗುವ ಉತ್ತಮ ಗುಣಮಟ್ಟದ ಎಂ ಸ್ಯಾಂಡ್, ಪಿ ಸ್ಯಾಂಡ್, ಎಲ್ಲಾ ತರಹದ ಜಲ್ಲಿಗಳು ಉತ್ತಮ ಬೆಲೆಯಲ್ಲಿ ದೊರೆಯುತ್ತವೆ.
9686363221, 8095874272

**ಲೇಡಿಸ್ ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವವಿರುವ ಲೇಡಿಸ್ ಬೇಕಾಗಿದ್ದಾರೆ.
ಶ್ರೀ ಧರ್ಮಸ್ಥಳ ಇಂಡೇನ್ ಗ್ಯಾಸ್ ಏಜೆನ್ಸಿ
ಎಸ್.ಎಸ್. ಹಾಸ್ಪಿಟಲ್ ರೋಡ್, ಕಾಳಿದಾಸ ಸರ್ಕಲ್, ಜಯನಗರ, ದಾವಣಗೆರೆ.
94481 66175

**ಹೋಟೆಲ್ ಬಾಡಿಗೆಗೆ ಇದೆ**
Hitech ಹಾಸ್ಪಿಟಲ್ ರೋಡ್ ಸಾಯಿಬಾಬಾ ದೇವಸ್ಥಾನದ ಹತ್ತಿರ, ಎಲ್ಲಾ ಸಾಮಾನುವುಳ್ಳ ಚಾಲ್ತಿಯಲ್ಲಿರುವ ಹೋಟೆಲ್ ಬಾಡಿಗೆಗೆ ದೊರೆಯುತ್ತದೆ.
97405 14510/ 97312 62215

**ಮನೆ ಬಾಡಿಗೆಗೆ ಇದೆ**
(ಸಸ್ಯಹಾರಿ ಮತ್ತು ಸರ್ಕಾರಿ ನೌಕರರಿಗೆ ಮಾತ್ರ), ಮೊದಲನೇ ಮಹಡಿ, 2 BHK / Rs. 9000/-, ಎರಡನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ,
94811-62162
99457-98264

**NEED TELECALLERS**
NEED EXPERIENCE TELECALLERS FOR BANKING PRODUCTS ANY DEGREE HOLDERS INTERESTED CANDIDATE CALL BELOW NUMBER.
97385 60365

**ಮನೆಗಳು ಮಾರಾಟಕ್ಕಿವೆ**
ಹರಿಹರ ನಗರ, ವಿದ್ಯಾ ನಗರ, ಎ ಬ್ಲಾಕ್ 40x60 ಪಶ್ಚಿಮ 2 ಅಂತಸ್ತಿನ ಹಾಗೂ ಹರಿಹರೇಶ್ವರ ಲೇಔಟ್ 30x40 ಡ್ಯೂಪ್ಲೆಕ್ಸ್ ಮನೆಗಳು ಮಾರಾಟಕ್ಕೆ ಇವೆ
9742770348,9844043438

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾಲ್ಲೂಕು, ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ 36'x88' ಅಳತೆಯಲ್ಲಿ ಬೋರ್‌ವೆಲ್ ಸೌಲಭ್ಯವಿರುವ ಉತ್ತರ ದಿಕ್ಕಿನ 3 ಬಿಹೆಚ್‌ಕೆ ಹೊಸ ಮನೆ (36'x68') ಮತ್ತು ಹಳೆಮನೆ (36'x20') ಮಾರಾಟಕ್ಕೆ ಇದೆ.
78925 87685, 97399 03499

**ವಧು ಬೇಕಾಗಿದೆ**
2ನೇ ಸಂಬಂಧಕ್ಕೆ ಹಿಂದೂ ಲಿಂಗಾಯತ, ವಿಚ್ಛೇದಿತೆ/ವಿಧವೆ ಎಸ್ಸೆಸ್ಸೆಲ್ಸಿ ಅಥವಾ ವಿದ್ಯಾರ್ಹತೆ ಇಲ್ಲದ ಮಹಿಳೆ ಇದ್ದಲ್ಲಿ ಸಂಪರ್ಕಿಸಿ
80731 24002

**HOUSE FOR LEASE**
2 BHK (G.F) & 4 BHK (First Floor) # 791/3-191 Jayanagara `A' Block, Davanagere. (Solar Facility Available)
99805 70842, 94489 65819

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ
88616 16188

**ಕೆಲಸಕ್ಕೆ ಬೇಕಾಗಿದ್ದಾರೆ**
ರಿಲಯನ್ಸ್‌ನಲ್ಲಿ ಲೈಫ್ ಪ್ಲಾನಿಂಗ್ ಆಫೀಸರ್ ಹುದ್ದೆಗೆ ಮಹಿಳೆಯರು ಬೇಕಾಗಿದ್ದಾರೆ.
ಬಿಐಸಿಸಿ ಅವಿನ್ಯೂ, 2ನೇ ಮಹಡಿ, ಎವಿಕೆ ಕಾಲೇಜ್ ರಸ್ತೆ, ಚೇತನ ಹೋಟೆಲ್ ಎದುರು, ದಾವಣಗೆರೆ.
98440 98800

**WANTED**
Electrician Boy
73537 25577
76187 96667

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**HOUSE FOR RENT**
1 BHK House, 2nd Floor, Face: purva, KB extension 2nd main 3rd cross near BJP office Davangere .
Dakshayini S.N
77605 34680

**ಬೇಕಾಗಿದ್ದಾರೆ**
ಹಾಸ್ಪಿಟಲ್‌ನಲ್ಲಿ ಇನ್ಸೂರೆನ್ಸ್ ಸ್ಕೀಮ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸ್ಟಾಫ್ ಬೇಕಾಗಿದ್ದಾರೆ.
ಉತ್ತಮ ವೇತನ ನೀಡಲಾಗುವುದು.
94835 87591

**REQUIRED**
LADY SALES EXECUTIVE
NILKAMAL FURNITURE
S.S. B. Block, Opp Sharadamba Temple Davanagere
82967 09299

**FOR SALE**
Industrial Estate Lokikere Road, Plot No. M-8, IInd Cross, Davangere.
Mesurement : 75x150
3000 Sqft Shed, 37 HP Power
98867 26258
96207 78993

**ಸೈಟು ಮಾರಾಟಕ್ಕಿದೆ**
ಹಳೆ ಕುಂದವಾಡದಲ್ಲಿರುವ 28.98 ×28 93 = 868 ಅಳತೆಯ ದಕ್ಷಿಣ ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ 40 × 60 (ಉತ್ತರ) ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
997234 3286

**ಮನೆ ಬಾಡಿಗೆಗೆ ಇದೆ**
First Floor : 2 BHK | Rs. 7000/-
Second Floor : 2BHK | Rs. 6000/-
3rd Main, 16th Cross, KTJ Nagara
90663 45346

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪಿ.ಯು. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಐಎಸ್) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್ ಲೇಡಿಸ್ ಇವರಿಗೆ ಬೇಕಾದರ ಕರೆ ಮಾಡಿ. ಕೆಲಸಕ್ಕೆ ಬೇಕಾದರ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**WANTED**
WE ARE HIRING
ASHOK LAYLAND
1) Supervisors - Diploma Mech
2) Parts - Diploma Mech - 1,
3) DBMSAP - Diploma Mech, Computer Knowledge
4) Technician - Electrician or Mechanic.
5) Security Guard - 10th Pass Contact :
95382 95776
91139 14031

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**WANTED**
OM DENTAL CARE
Ram & Co Circle, Near Bank of Baroda ,Davangere.
1) Staff 2) Attender
(Full time & Part Time)
90669 93738

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.**
98860 97065

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಮನೆ ಬಾಡಿಗೆಗೆ ಇದೆ**
3 BHK + 1 ಅಟ್ಯಾಚ್ ರೂಂ ಮಹಡಿ ಮೇಲೆ ಹಾಗೂ 3 ಕಾರು ನಿಲ್ಲಿಸಲು ಸ್ಥಳವಿರುವ, ಆಫೀಸು ಅಥವಾ ವಾಸಕ್ಕೆ ಯೋಗ್ಯವಾದ ವಿಶಾಲವಾದ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವಿದೆ. 4ನೇ ಮೇನ್, ನಿಟುವಳ್ಳಿ ಹೊಸ ಬಡಾವಣೆ, SBI ಹತ್ತಿರ
94482 01195

**ತಕ್ಷಣ ಸೆಕ್ಯೂರಿಟಿ ಗಾರ್ಡ್ಸ್/ Supevisor ಬೇಕಾಗಿದ್ದಾರೆ**
12 hours duty + ESI PF
Salary 9000-14000
91130 53483

**ಮಾರಾಟಕ್ಕಿದೆ**
ಫ್ಯಾನ್ಸಿ ಸ್ಟೋರ್ ಫರ್ನಿಚರ್ಸ್ ಹಾಗೂ ಸಾಮಾನುಗಳು ಒಳಗೊಂಡಿದೆ. ಅರ್ಧ ಬೆಲೆಗೆ ಮಾರಾಟಕ್ಕಿದೆ. ಕೇವಲ 150000/- ಕ್ಕೆ ಸಂಪರ್ಕಿಸಿ :
97415 72926

**ರಕ್ತ ದಾನ ಶ್ರೇಷ್ಠ ದಾನ**

**CHANGE OF NAME**
I, M.J. Manjula (Manjula Muniyappajjar Jayappa) Previously called Manjula Suresh, Resident of # 1922/A11, SUMA Nilaya, 5th Main, Near Taralabalu Krishi Vignana kendra, Swamy Vivekananda Badavane, Davangere - 577 004 have changed My name as M.J. Manjula vide affidavit dated 19.9.2024 sworn before Notary M Prathaparudra Reg. No. Law 7 LCL, Davangere. Hence forth all my transactions & dealings will be in my new name M.J. Manjula.
Sd/- M.J. Manjula

**SEHEJ**
Ladies exbition cum sales and food mela
At Bapuji Samudaya Bhavan, Davangere
From 10 am to 10 pm
On 23rd September Monday
Cum and grab the opportunity of Shopping
84316 15003

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**WANTED MARKETING EXECUTIVE**
2 to 3 years Experience, DAVANGERE.
63620 23451, 97434 37003

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 15 ಸೀಟುಗಳಿವೆ ಆಸಕ್ತಿಯುಳ್ಳವರು ಕರೆಮಾಡಿ.
90086 26473, 94485 33928

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ವಾಣಿಜ್ಯ ಮಳಿಗೆ ಮಾರಾಟಕ್ಕೆ / ಬಾಡಿಗೆಗೆ**
ದಾವಣಗೆರೆ ಪಿ.ಬಿ.ರಸ್ತೆ ಸಂಗೊಳ್ಳಿ ರಾಯಣ್ಣ ವೃತ್ತದ ಎಡಬದಿ ರಸ್ತೆಯಲ್ಲಿರುವ 15x40 ಅಳತೆಯ ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ವ್ಯವಸ್ಥೆ ಮಳಿಗೆ.
86601 25491, 98453 63900

**ಸೈಟು ಮಾರಾಟಕ್ಕಿದೆ**
ಶಂಕರ ವಿಹಾರ್ ಬಡಾವಣೆಯಲ್ಲಿ ಡೋರ್ ನಂ. ಆಗಿರುವ 30x80 ಅಡಿವುಳ್ಳ (ದಕ್ಷಿಣ) ಸೈಟು ತುರ್ತು ಮಾರಾಟಕ್ಕಿದೆ. (4ನೇ ಕ್ರಾಸ್) ಸಂಪರ್ಕಿಸಿ :
94810 93644, 94810 93636

# ರೈಲ್ವೆಯಿಂದ ವಿಶೇಷ ಅಭಿಯಾನ

**(3ನೇ ಪುಟದಿಂದ)** 15 ರವರೆಗೆ ಹಾಗೂ ಅಕ್ಟೋಬರ್ 25 ರಿಂದ ನವೆಂಬರ್ 10ರ ವರೆಗೆ ಟಿಕೆಟ್ ರಹಿತ ಪ್ರಯಾಣ ತಡೆಗೆ ವಿಶೇಷ ಅಭಿಯಾನ ನಡೆಸುವಂತೆ ತಿಳಿಸಿದೆ.

ಹಬ್ಬದ ದಿನಗಳಲ್ಲಿ ಹೆಚ್ಚಿನ ಜನಜಂಗುಳಿ ಇರುತ್ತದೆ. ಈ ಸಂದರ್ಭದಲ್ಲಿ ಜನ ಸಾಮಾನ್ಯರ ಜೊತೆಗೆ ಪೊಲೀಸರೂ ಸಹ ಟಿಕೆಟ್ ರಹಿತವಾಗಿ ಪ್ರಯಾಣ ಮಾಡುವುದು ಕಂಡು ಬಂದಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಇತ್ತೀಚೆಗೆ ಘಾಜಿಯಾಬಾದ್ ಹಾಗೂ ಕಾನ್ಪುರಗಳಲ್ಲಿ ಹಠಾತ್ ತಪಾಸಣೆ ನಡೆಸಿದಾಗ ನೂರಾರು ಪೊಲೀಸರು ವಿವಿಧ ರೈಲುಗಳ ಎ.ಸಿ. ಬೋಗಿಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದುದು ಕಂಡು ಬಂದಿತ್ತು. ಅವರಿಗೆ ದಂಡ ವಿಧಿಸಲಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆರಂಭದಲ್ಲಿ ಅವರು ದಂಡ ಪಾವತಿಲು ನಿರಾಕರಿಸಿದ್ದರು. ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ನಂತರ ದಂಡ ಪಾವತಿಸಿದ್ದಾರೆ ಎಂದು ರೈಲ್ವೆ ಅಧಿಕಾರಿ ತಿಳಿಸಿದ್ದಾರೆ.

ಪೊಲೀಸ್ ಸಿಬ್ಬಂದಿಯ ವಿರುದ್ಧ ಈ ರೀತಿಯ ಕ್ರಮ ತೆಗೆದುಕೊಂಡಿದ್ದಕ್ಕೆ ಇತರೆ ಪ್ರಯಾಣಿಕರು ಅಚ್ಚರಿ ಹಾಗೂ ಸಂತೋಷ ವ್ಯಕ್ತಪಡಿಸಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಟಿಕೆಟ್ ರಹಿತ ಪ್ರಯಾಣಿಕರು ಇತರೆ ಟಿಕೆಟ್ ಖರೀದಿಸಿರುವ ಪ್ರಯಾಣಿಕರಿಗೆ ಕಿರಿಕಿರಿ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉತ್ತರ ಕೇಂದ್ರ ರೈಲ್ವೆ ವಲಯದ ಪ್ರಯಾಗ್‌ರಾಜ್ ವಿಭಾಗ ಒಂದರಲ್ಲೇ ಕಳೆದ ಮೂರು ತಿಂಗಳಲ್ಲಿ 1,17,633 ಪ್ರಯಾಣಿಕರು ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದುದು ಪತ್ತೆಯಾಗಿದೆ. ಇವರಿಗೆ 9.14 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಟಿಕೆಟ್ ರಹಿತವಾಗಿ ಪ್ರಯಾಣಿಸುವ ಪೊಲೀಸರದ್ದೇ ದೊಡ್ಡ ಸಮಸ್ಯೆಯಾಗಿದೆ. ಅವರು ನಿಯಮ ಉಲ್ಲಂಘಿಸುತ್ತಾರೆ. ಅಷ್ಟೇ ಅಲ್ಲದೇ, ಟಿಕೆಟ್ ಹೊಂದಿರುವ ಪ್ರಯಾಣಿಕರು ತಮ್ಮ ಬರ್ತ್ ಹಂಚಿಕೊಳ್ಳಬೇಕು ಎಂದು ಬಲವಂತ ಪಡಿಸುತ್ತಾರೆ. ಕ್ರಮ ತೆಗೆದುಕೊಳ್ಳಲು ಮುಂದಾಗುವ ರೈಲ್ವೆ ಉದ್ಯೋಗಿಗಳಿಗೂ ಬೆದರಿಕೆ ಹಾಕುತ್ತಾರೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಟಿಕೆಟ್ ರಹಿತ ಪ್ರಯಾಣಿಕರನ್ನು ಎದುರಿಸುವುದು ನಮಗೆ ಕರಾಳ ಸ್ವಪ್ನವಾಗಿದೆ. ಅವರು ನಮ್ಮೊಂದಿಗೆ ದುರ್ವರ್ತನೆ ತೋರುತ್ತಾರೆ. ಅಲ್ಲದೇ, ನಮ್ಮ ವಿರುದ್ಧ ಹುಸಿ ಪ್ರಕರಣ ದಾಖಲಿಸುವುದಾಗಿ ಬೆದರಿಸುತ್ತಾರೆ ಎಂದು ಭಾರತೀಯ ರೈಲ್ವೆ ಟಿಕೆಟ್ ಚೆಕ್ಕಿಂಗ್ ಸಿಬ್ಬಂದಿ ಸಂಘಟನೆ (ಐ.ಆರ್.ಟಿ.ಸಿ. ಎಸ್.ಒ.) ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ.

ರೈಲ್ವೆ ಸಿಬ್ಬಂದಿ, ಟಿಟಿಇ ಹಾಗೂ ಸಾಮಾನ್ಯ ಪ್ರಯಾಣಿಕರ ಜೊತೆ ಟಿಕೆಟ್ ರಹಿತ ಪೊಲೀಸ್ ಸಿಬ್ಬಂದಿ ಸಂಘರ್ಷಕ್ಕೆ ಇಳಿದ ಹಲವು ವಿಡಿಯೋಗಳು ವೈರಲ್ ಆಗಿವೆ. ಇಂತಹವರಿಂದ ಪೊಲೀಸ್ ಇಲಾಖೆಯ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ. ಇವರ ವಿರುದ್ಧ ಸಂಬಂಧಿಸಿದ ಇಲಾಖೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಸಿಂಗ್ ಒತ್ತಾಯಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ ರೈಲ್ವೆಯಲ್ಲಿ ವ್ಯಾಪಕವಾಗಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ನೀಡಲಾದ ಮಾಹಿತಿಯ ಪ್ರಕಾರ, 2023-24ರಲ್ಲಿ 361.045 ಲಕ್ಷ ಜನರು ಟಿಕೆಟ್ ರಹಿತ ಪ್ರಯಾಣ ಮಾಡುವಾಗ ಸಿಕ್ಕಿ ಬಿದ್ದಿದ್ದರು. ಇವರಿಂದ 2,231.74 ಕೋಟಿ ರೂ.ಗಳ ದಂಡ ವಸೂಲಿ ಮಾಡಲಾಗಿತ್ತು.

# ಹೊಸ ಬಸ್‌ಸ್ಟ್ಯಾಂಡ್‌ಗೆ ಬಸ್

**(3ನೇ ಪುಟದಿಂದ)** ಲಾಗುವುದು ಎಂದರು.

ಹೆಚ್ಚು ಅನುದಾನ ತರುವ ಮೂಲಕ ನೀರಾವರಿ, ರಸ್ತೆ ಸೇರಿದಂತೆ ಮೂಲ ಭೂತ ಸೌಲಭ್ಯಗಳನ್ನು ಒದಗಿಸಲು ಕಾರ್ಯೋನ್ಮುಖರಾ ಗುತ್ತೇವೆ. ಅನ್ನ, ಸೂರು, ವಿದ್ಯಾಭ್ಯಾಸ ಹಾಗೂ ಆರೋಗ್ಯದ ದೃಷ್ಟಿಯಿಂದ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ ಎಂದು ಸಚಿವರು ಹೇಳಿದರು.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಎರಡು ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸಿಬ್ಬಂದಿಗೆ ಕ್ವಾರ್ಟರ್ಸ್ ಸೌಲಭ್ಯ ಕಲ್ಪಿಸುವಂತೆ ಸಚಿವರಿಗೆ ಇದೇ ಸಂದರ್ಭದಲ್ಲಿ ಮನವಿ ಸಲ್ಲಿಸಲಾಯಿತು. ದೂಡಾ ಮೂಲಕ ಜಾಗ ಒದಗಿಸಿ ಕ್ವಾರ್ಟರ್ಸ್‌ಗೆ ನೆರವು ನೀಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಇದೇ ವೇಳೆ ದಾವಣಗೆರೆ – ಶಿವಮೊಗ್ಗ ಮಾರ್ಗಕ್ಕೆ ಎರಡು ರಾಜಹಂಸ, ದಾವಣಗೆರೆ – ಕುಕ್ಕೆ ಸುಬ್ರಹ್ಮಣ್ಯ ಮತ್ತು ದಾವಣಗೆರೆ – ಸಿರಿಗೆರೆ ಮಠಕ್ಕೆ ವೇಗದೂತ ಬಸ್‌ಗಳಿಗೆ ಸಚಿವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ಮೇಯರ್ ವಿನಾಯಕ್ ಪೈಲ್ವಾನ್, ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ವಿಭಾಗೀಯ ಯಾಂತ್ರಿಕ ಅಭಿಯಂತರ ಕೆ. ವೆಂಕಟೇಶ್, ವಿಭಾಗೀಯ ಸಂಚಾಲನಾಧಿಕಾರಿ ಫಕೃದ್ದೀನ್ ಮತ್ತಿತರರು ಉಪಸ್ಥಿತರಿದ್ದರು.

## ಹಣದ ಬಳಕೆ ಗೊತ್ತಿಲ್ಲ

**(3ನೇ ಪುಟದಿಂದ)** ಮೂರ್ಖರು, ಹಣ ಹೇಗೆ ಬಳಕೆ ಮಾಡಿಕೊಳ್ಳಬೇಕು ಎಂಬುದು ಗೊತ್ತಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು. ಆದರೂ, ಈ ಯೋಜನೆಯಲ್ಲಿ ಎಲ್ಲೂ ಕಳಪೆ ಕಾಮಗಾರಿಗಳಾಗಿಲ್ಲ. ದಾವಣಗೆರೆ ಜನತೆ ಹಾಗೂ ಹೊರಗಿನಿಂದ ಬರುವವರಿಗೆ ಸುಸಜ್ಜಿತ ಬಸ್ ನಿಲ್ದಾಣ ಸಿದ್ಧವಾಗಿದೆ ಎಂದವರು ತಿಳಿಸಿದರು. ಖಾಸಗಿ ಬಸ್ ನಿಲ್ದಾಣದ ನವೀಕರಣಕ್ಕೆ ಬಹಳ ಚೆನ್ನಾಗಿ ಯೋಜನೆ ರೂಪಿಸಿದ್ದೆವು. ಆದರೆ, ಬಿಜೆಪಿ ಆಡಳಿತದಲ್ಲಿ ಅದನ್ನು ಮೊಟಕುಗೊಳಿಸಲಾಯಿತು. ಈಗ ಅಲ್ಲಿ ಬಸ್ ಟರ್ನ್ ಹಾಗೂ ರಿವರ್ಸ್ ಹೋಗಲು ಸಾಧ್ಯವಿಲ್ಲದಂತಾಗಿದೆ. ಈಗ ಯೋಜನೆಯನ್ನು ಬದಲಿಸಿದ್ದೇವೆ ಎಂದೂ ಸಚಿವರು ಹೇಳಿದರು.

# ದೃಶ್ಯಕಲಾ ಶಾಲೆಯ ಅಭಿವೃದ್ಧಿಗೆ ಪೂರಕ ರೋಡ್ ಮ್ಯಾಪ್ ನೀಡಿ

## ಕಲಾ ವಿವಿಯ 'ವಜ್ರ ಮಹೋತ್ಸವ' ಸಮಾರಂಭದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಸೆ.22- ದೃಶ್ಯಕಲಾ ಮಹಾ ವಿದ್ಯಾಲಯದ ಜೊತೆ ನಾವಿದ್ದೇವೆ, ಈ ಕಲಾ ಶಾಲೆಯ ಅಭಿವೃದ್ಧಿಗೆ ಪೂರಕವಾದ 'ರೋಡ್ ಮ್ಯಾಪ್' ನಮಗೆ ಕೊಟ್ಟರೆ ರಾಜ್ಯದಲ್ಲೇ ಮಾದರಿ ದೃಶ್ಯಕಲಾ ಮಹಾ ವಿದ್ಯಾಲಯ ಮಾಡಲು ನಾನು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭರವಸೆ ನೀಡಿದರು.

ಇಲ್ಲಿನ ದೃಶ್ಯಕಲಾ ಮಹಾ ವಿದ್ಯಾಲಯದ 60ನೇ ವಾರ್ಷಿಕೋತ್ಸವದ ಪ್ರಯುಕ್ತ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ವಜ್ರ ಮಹೋತ್ಸವ' ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಅಭಿವೃದ್ಧಿಯಲ್ಲಿ ಹಳೇ ವಿದ್ಯಾರ್ಥಿಗಳ ಜವಾಬ್ದಾರಿ ಅಧಿಕ. ಕಾಲೇಜಿನ ಪ್ರತಿಯೊಂದು ಮಹೋತ್ಸವದ ನೆನಪಿಗಾಗಿ ಕಲಾ ಭವನ ನಿರ್ಮಿಸುವುದು ಚಿ.ಸು. ಕೃಷ್ಣ ಶೆಟ್ಟಿ ಅವರ ಕನಸಾಗಿದೆ. ಹಾಗಾಗಿ ಹಳೇ ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಾರ್ಷಿಕ ಸಭೆ ನಡೆಸಿ ಅಭಿವೃದ್ಧಿಯ ಬಗ್ಗೆ ಯೋಜನೆ ರೂಪಿಸುವಂತೆ ತಿಳಿಸಿದರು.

ಕಲಾವಿದರು ಸಮಾಜದ ಕನ್ನಡಿ ಆಗಿದ್ದಾರೆ. ಇಂದಿನ ಮಕ್ಕಳು ಮೊಬೈಲ್ ಗೀಳಿಗೆ ಅಂಟಿ ಕೊಂಡಿದ್ದರಿಂದ ಅವರ ದೈನಂದಿನ ಚಟುವಟಿಕೆಯಲ್ಲಿ ವ್ಯತ್ಯಾಸವಾಗಿದ್ದು, ಇದನ್ನು ಸರಿ ಪಡಿಸಲು ಕಲಾ ಅಭಿರುಚಿ ಬೆಳೆಸಬೇಕು ಎಂದರು.

ಮಕ್ಕಳ ಭಾವನಾತ್ಮಕ ಸ್ವಾಸ್ಥ್ಯ ಸದೃಢವಾಗಿರಿಸಲು ಕಲೆ ಸಹಾಯಕವಾಗಿದೆ. ಈ ನಿಟ್ಟಿನಲ್ಲಿ ಕಲಾ ವಿದ್ಯಾರ್ಥಿಗಳು ಸಮಾಜದ ಆಸ್ತಿ ಆಗಲಿದ್ದಾರೆ ಎಂದರು.

ಸದೃಢ ಸಮಾಜ ಕಟ್ಟಲು ಕಲಾವಿದರ ಅವಶ್ಯವಿದೆ ಹಾಗಾಗಿ ಯುವಕರು ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿ ಸಾಮಾಜಿಕ ಜವಾಬ್ದಾರಿ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ದಾವಣಗೆರೆ ವಿವಿಯ ಕುಲಪತಿ ಬಿ.ಡಿ. ಕುಂಬಾರ್ ಮಾತನಾಡಿ, ಹಳೇ ವಿದ್ಯಾರ್ಥಿಗಳು ಕಾಲೇಜಿನ ಬ್ರ್ಯಾಂಡ್ ಅಂಬಾಸಿಡರ್ ಆಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಕಾಲೇಜು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಸಾಧ್ಯ ಎಂದರು.

ಅಲ್ಯುಮ್ನಿ ಅಸೋಸಿಯೇಷನ್‌ನಿಂದ ಕಾಲೇಜಿನ ಅಭಿವೃದ್ಧಿ ಸಾಧ್ಯ. ಆದ್ದರಿಂದ ಕಲಾ ಕಾಲೇಜಿನ ಪ್ರಾಧ್ಯಾಪಕರನ್ನು ಖಾಯಂ ಗೊಳಿ ಸಲು ಹಳೇ ವಿದ್ಯಾರ್ಥಿಗಳು ರಾಜ್ಯ ಸರ್ಕಾರಕ್ಕೆ ಒತ್ತಡ ಹಾಕಬೇಕು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಿಂದ ಕಲಾ ಶಾಲೆಯ 4 ಎಕರೆ ಜಾಗ ಕಾಲೇಜಿಗೆ ಮರಳಲಿದೆ ಎಂದರು.

ವಜ್ರ ಮಹೋತ್ಸವ ಸಮಿತಿಯ ಅಧ್ಯಕ್ಷ ಚಿ.ಸು. ಕೃಷ್ಣಶೆಟ್ಟಿ ಪ್ರಾಸ್ತಾವಿಕ ಮಾತನಾಡಿ, ಕಲಾ ಕಾಲೇಜಿಗೆ ಬಹಳ ಅನ್ಯಾಯವಾಗಿದೆ. ಈ ಹಿಂದೆ ಇದ್ದ ಪ್ರಾಚಾರ್ಯರಿಂದ ಕಾಲೇಜು ತನ್ನ ಜಾಗ ಕಳೆದು ಕೊಂಡಿತು ಎಂದು ದೂರಿದರು. ಕಾಲೇಜು ಅಭಿವೃದ್ಧಿ ಪಡಿಸಲು ದಾವಣಗೆರೆ ಜನ ಈ ಹಿಂದೆ ಮಾಡಿದ್ದ ಪ್ರಮಾಣವನ್ನು ಈ ದಿನ ನೆನಪಿಸಿಕೊಂಡು ಕಾರ್ಯ ಪ್ರವೃತ್ತರಾಗಬೇಕು. ಇದಕ್ಕೆ ಸಂಸದರು ನೆರವು ಬೇಕು ಎಂದರು. ವಿದ್ಯಾಲಯದ ಆಸ್ತಿಯಲ್ಲಿ ಕಾಲೇಜಿಗೆ ಸಂಬಂಧಿಸಿದ ಕಟ್ಟಡವಷ್ಟೇ ನಿರ್ಮಾಣವಾಗಬೇಕು. ಮುಂದಿನ ದಿನಗಳಲ್ಲಿ ನಮ್ಮ ಒಂದಿಂಚು ಜಾಗವೂ ಹೋಗದಂತೆ ಸಂಕಲ್ಪ ಮಾಡಬೇಕು ಎಂದರು.

> ದಾವಣಗೆರೆ ವಿವಿಯ ಕುಲಪತಿಗಳು ಹಾಗೂ ಸಂಸದರು ಕಲಾ ಶಾಲೆಯ ಶಿಕ್ಷಕರನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಬೇಕು.
>
> -ಚಿ.ಸು. ಕೃಷ್ಣಶೆಟ್ಟಿ

### ಡಿಸಿ, ಎಸ್ಪಿ ಮನೆಗೆ ಅವಕಾಶವಿಲ್ಲ

> ದೃಶ್ಯಕಲಾ ಮಹಾವಿದ್ಯಾಲಯದ ಜಾಗದಲ್ಲಿ ಡಿಸಿ ಹಾಗೂ ಎಸ್ಪಿ ಅವರ ಮನೆ ನಿರ್ಮಾಣ ಆಗದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಆದೇಶಿಸಿದ್ದಾರೆ. ಅದರ ಬಗ್ಗೆ ಆತಂಕ ಬೇಡ.
>
> -ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದರು

ಈ ವೇಳೆ ಕಾಲೇಜಿನ ಪ್ರಾಚಾರ್ಯ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಗಣಪತಿ ಎಸ್. ಹೆಗಡೆ, ಸುರೇಶ್ ವಾಗ್ಮೋರೆ, ಗೋಪಾಲ್ ಕೃಷ್ಣ, ಶ್ವೇತಾ ನಿರೂಪಿಸಿದರು. ಇಂದ್ರ ಕುಮಾರ್ ಪ್ರಾರ್ಥನೆ ಮಾಡಿದರು.

# ಪ್ರಚೋದನಕಾರಿ ಹೇಳಿಕೆ : ಇಬ್ಬರ ಬಂಧನ

**(3ನೇ ಪುಟದಿಂದ)** ಆರೋಪದಡಿ ಶಿವಮೊಗ್ಗ ಜಿಲ್ಲೆ ಸಾಗರದಲ್ಲಿದ್ದ, ಹಿಂದು ಜಾಗರಣ ವೇದಿಕೆ ಪ್ರಾಂತ ಸಹ ಸಂಯೋಜಕ ಸತೀಶ್ ಪೂಜಾರಿಯನ್ನು ಶನಿವಾರ ತಡರಾತ್ರಿ ಬಂಧಿಸಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿನ ಕೋಮುಗಲಭೆ ವಿರೋಧಿಸಿ ಸಾರ್ವಜನಿಕ ಗಣೇಶೋತ್ಸವ ಸಮಿತಿ ಸಹಯೋಗದಲ್ಲಿ ಸೆ. 18ರಂದು ದಾವಣಗೆರೆಯಲ್ಲಿ ನಡೆದಿದ್ದ ಪ್ರತಿಭಟನೆ ವೇಳೆ ಸತೀಶ್ ಪೂಜಾರಿ ಪ್ರಚೋದನಾಕಾರಿ ಭಾಷಣ ಮಾಡಿದ್ದಾಗಿ ದೂರು ನೀಡಲಾಗಿತ್ತು. ಇದಕ್ಕೆ ಬದಲಿಯಾಗಿ ಪ್ರಚೋದನಾತ್ಮಕ ಹೇಳಿಕೆಯ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಆರೋಪದ ಮೇಲೆ ಸಯ್ಯದ್ ನೂರ್ ಅಹ್ಮದ್ ಎಂಬ ಆರೋಪಿಯನ್ನೂ ಬಸವನಗರ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

# ಅಧ್ಯಕ್ಷರಾಗಿ ವಿಠಲ್ ಪುನರಾಯ್ಕೆ

**(3ನೇ ಪುಟದಿಂದ)** ಮಂದಿರದಲ್ಲಿ ನಿನ್ನೆ ನಡೆದ ನಾಮದೇವ ಸಿಂಪಿ ಸಮಾಜದ ಸರ್ವ ಸದಸ್ಯರ ಮಹಾಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು. ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ, ಸಮಾಜದ ಮುಖಂಡರುಗಳಾದ ಎ. ಕಿರಣ್‌ಕುಮಾರ್, ಆರ್.ಕೆ. ಆನಂದರಾವ್, ಮಹೇಂದ್ರಕರ್ ಮಂಜುನಾಥ (ಅವಿನಾಶ್), ಎ.ಪ್ರಭಾಕರ್, ಮನೋಹರ ಎಸ್. ಬೊಂಗಾಳೆ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ಕೆ. ಶಿವಶಂಕರ್ ಅವರ ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ಪ್ರಧಾನ ಕಾರ್ಯದರ್ಶಿ ಮನೋಹರ ವಿ. ಬೊಂಗಾಳೆ ಸ್ವಾಗತಿಸಿದರು. ವಿಠ್ಠಲ್ ರಾಕುಂಡೆ ವಂದಿಸಿದರು.

# ತರಳಬಾಳು ಶಾಲಾ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆ



ಹರಪನಹಳ್ಳಿ

ಹರಪನಹಳ್ಳಿ, ಸೆ. 22 - ಇತ್ತಿಚಿಗೆ ಜರುಗಿದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಪಟ್ಟಣದ ತರಳಬಾಳು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಬಾಲಕರ ವಿಭಾಗದ 600ಮೀಟರ್ ಓಟದಲ್ಲಿ ಜೀವನ್ ಕುಮಾರ ಎಂ. ಪ್ರಥಮ ಸ್ಥಾನ ಬಾಲಕಿಯರ ವಿಭಾಗದ 4/100ರೀಲೆ ಸ್ಪರ್ಧೆಯಲ್ಲಿ ಸಿ.ಮೋಹನ್. ಸೃಜನ್ ವಿ.ಬಿ. ಸಬೇರ, ನಯನ ಇವರುಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಾಲೆಯ ಸ್ಥಳೀಯ ಸಮಿತಿಯ ಅದ್ಯಕ್ಷ ಜಿ.ನಂಜನಗೌಡ್ರು, ಉಪಾಧ್ಯಕ್ಷ ಕೊಂಡಜ್ಜಿ ರೇವಣಸಿದ್ದಪ್ಪ, ಕಾರ್ಯದರ್ಶಿ ಕುಸುಮ ಜಗದೀಶ, ಶಾಲೆಯ ಮುಖ್ಯ ಶಿಕ್ಷಕರಾದ ನಂಜಪ್ಪ ಸೇರಿದಂತೆ ಇತರರು ಅಭಿನಂದಿಸಿದ್ದಾರೆ.


## ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಜನ್ಮದಿನವನ್ನು ನಗರಪಾಲಿಕೆ ಮಾಜಿ ಸದಸ್ಯರಾದ ಶ್ರೀ ಎಸ್. ಬಸಪ್ಪನವರ ನಿವಾಸದಲ್ಲಿ 57 ಕೆ.ಜಿ. ಬೃಹತ್ ಕೇಕ್ ಕತ್ತರಿಸುವುದರ ಮೂಲಕ ಆಚರಣೆ









ಕರ್ನಾಟಕ ಸರ್ಕಾರದ ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ
**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಅವರ 57ನೇ ಜನ್ಮದಿನವನ್ನು ದಿನಾಂಕ 22-9-2024ರ ಭಾನುವಾರ
ಹೊಂಡದ ಸರ್ಕಲ್‌ನಿಂದ ದುರ್ಗಾಂಬಿಕಾ ದೇವಸ್ಥಾನ ರಸ್ತೆಯಲ್ಲಿರುವ
ನಗರಪಾಲಿಕೆ ಮಾಜಿ ಸದಸ್ಯರಾದ **ಶ್ರೀ ಎಸ್ ಬಸಪ್ಪ**ನವರ ನಿವಾಸದಲ್ಲಿ
57 ಕೆ.ಜಿ. ಬೃಹತ್ ಕೇಕ್ ಕತ್ತರಿಸುವುದರ ಮೂಲಕ ಅತೀ ವಿಜೃಂಭಣೆಯಿಂದ ಆಚರಿಸಲಾಯಿತು.
ಈ ಸಂದರ್ಭದಲ್ಲಿ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ಅವರೊಂದಿಗೆ ♦ **ನಗರಪಾಲಿಕೆ ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಬಸಪ್ಪ**, ♦ ಕಾಂಗ್ರೆಸ್ ಯುವ ಮುಖಂಡರಾದ **ಶ್ರೀ ಎಸ್.ಬಿ.ನಾಗರಾಜ್ ಮತ್ತು ಕುಟುಂಬ ವರ್ಗದವರು.**
ಕಾಂಗ್ರೆಸ್ ಮುಖಂಡರುಗಳಾದ ♦ **ಶ್ರೀ ಗಣೇಶ್ ಹುಲ್ಮನಿ** ♦ **ಶ್ರೀ ಎಂ.ಬಿ.ಸನಾವುಲ್ಲಾ** ♦ **ಶ್ರೀ ಎಂ.ಎಸ್.ಅಶ್ರಫ್** ♦ **ಶ್ರೀ ಎನ್.ಆರ್.ಸುರೇಶ್** ♦ **ಶ್ರೀ ಹೆಚ್.ಎಸ್.ರುದ್ರೇಶ್** ♦ **ಶ್ರೀ ಎಸ್.ಡಿ. ರವಿಕುಮಾರ್** ♦ **ಶ್ರೀ ನಂದೀಶ್ ಆರ್.**
**ಪುಟಾಣಿಗಳಾದ ♦ ಮಯೂರ್ ♦ ಧೃವ ಸಾಮ್ರಾಟ್ ♦ ಅಪಾರ ಸಂಖ್ಯೆಯಲ್ಲಿ ಎಸ್ಸೆಸ್ಸೆಂ ಅಭಿಮಾನಿಗಳು** ಉಪಸ್ಥಿತರಿದ್ದರು.
**ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು.**



## ಜನ್ಮದಿನದ ಶುಭಾಶಯಗಳು




ಜನಪ್ರಿಯ ನಾಯಕರು, ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ, ಜನಾನುರಾಗಿಯೂ ಆದ
**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್**
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.



**ಜೆ.ಆರ್. ಷಣ್ಮುಖಪ್ಪ,**
'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರು
ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲ,
ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು,
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ದಾವಣಗೆರೆ

**ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ**
- ದಿ ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘ ನಿ., ದಾವಣಗೆರೆ.
- ಜಿಲ್ಲಾ ಹಾಪ್‌ಕಾಮ್ಸ್, ದಾವಣಗೆರೆ.
- ದಾವಣಗೆರೆ ನಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದಾವಣಗೆರೆ.
- ಚನ್ನಗಿರಿ ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ.

॥ ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥





ಜನ್ಮದಿನದ ಶುಭಾಶಯಗಳು

ಶ್ರೀ ವೀರಭದ್ರೇಶ್ವರ ಸ್ವಾಮಿಯ ಪರಮ ಭಕ್ತರೂ,
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಆದ

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರಿಗೆ 57ನೇ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಶ್ರೀ ವೀರಭದ್ರೇಶ್ವರ ಸ್ವಾಮಿಯು ಶ್ರೀಯುತರಿಗೆ ಸದಾಕಾಲ ಆಯುಷ್ಯ,
ಆರೋಗ್ಯ ಭಾಗ್ಯ ಕೊಟ್ಟು ಇನ್ನೂ ಹೆಚ್ಚಿನ ಜನಸೇವೆ ಮಾಡಲು
ಶಕ್ತಿ ನೀಡಿ, ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಸಮಿತಿ (ರಿ.)
ಹಳೇಪೇಟೆ, ದಾವಣಗೆರೆ.



॥ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪ್ರಸನ್ನ ॥



ಜನ್ಮದಿನದ ಶುಭಾಶಯಗಳು



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ ಪರಮ ಭಕ್ತರು,
ಸಂಘಟನಾ ಚತುರರು, ದಾವಣಗೆರೆ ನಗರದ
ಅಭಿವೃದ್ಧಿಯ ಹರಿಕಾರರು, ಕೊಡುಗೈ ದಾನಿಗಳೂ
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರಿಗೆ 57ನೇ ಜನ್ಮ ದಿನದ ಹಾರ್ದಿಕ ಶುಭಾಶಯಗಳನ್ನು ಕೋರುತ್ತಾ,
ಶ್ರೀ ಗುರು ಬಕ್ಕೇಶ್ವರ ಸ್ವಾಮಿಯು ಶ್ರೀಯುತರಿಗೆ ಸದಾಕಾಲ ಆಯುಷ್ಯ,
ಆರೋಗ್ಯ ಭಾಗ್ಯ ಕೊಟ್ಟು ಇನ್ನೂ ಹೆಚ್ಚಿನ ಜನಸೇವೆ ಮಾಡಲು ಶಕ್ತಿ ನೀಡಿ,
ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.)
ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ರಥೋತ್ಸವ ಕಮಿಟಿ
ಚೌಕಿಪೇಟೆ, ದಾವಣಗೆರೆ-1.






ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ
ಸಚಿವರೂ, ಅಭಿವೃದ್ಧಿ ಹರಿಕಾರರು, ಸಂಘಟನಾ ಚತುರರು,
ಯುವ ಜನತೆಯ ಸ್ಫೂರ್ತಿ, ಸ್ನೇಹ ಜೀವಿಗಳೂ, ನಮ್ಮ ನೆಚ್ಚಿನ ನಾಯಕರೂ ಆದ

ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರಿಗೆ 57ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು.



ಕರೂರು ನಾಗರಾಜಪ್ಪ | ಕರೂರು ನರೇಂದ್ರ | ಕರೂರು ಷಣ್ಮುಖ | ಕರೂರು ಉಮೇಶ್

ಮೆ॥ ಕರೂರು ಚಿರಂಜೀವಿ ಆಗ್ರೋ ಫುಡ್ಸ್
56/3A, ಕೊಂಡಜ್ಜಿ ರಸ್ತೆ, ಆವರಗೊಳ್ಳ. ದಾವಣಗೆರೆ.






ಜನ್ಮದಿನದ ಶುಭಾಶಯಗಳು

ದಾವಣಗೆರೆ ನಗರದ ಸರ್ವತೋಮುಖ ಅಭಿವೃದ್ಧಿಯ ಹರಿಕಾರ,
ಅಭಿವೃದ್ಧಿಯೇ ಆಡಳಿತದ ಮಂತ್ರ ಎಂದು ಜಪಿಸಿದ ಆಡಳಿತಗಾರ,
ಯುವ ನೇತಾರ, ಕೊಡುಗೈ ದಾನಿಗಳೂ, ಗಣಿ, ಭೂ ವಿಜ್ಞಾನ ಮತ್ತು
ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರಿಗೆ 57ನೇ ಹುಟ್ಟುಹಬ್ಬದ ಶುಭಾಶಯಗಳು.



ರಾಕೇಶ್ ಆರ್.ಎಸ್.
ಯುವ ಕಾಂಗ್ರೆಸ್ ಮುಖಂಡರು

ಆರ್.ಎಸ್. ಶೇಖರಪ್ಪ
ಕಾಂಗ್ರೆಸ್ ಮುಖಂಡರು



ರಂಜಿತ್ ಆರ್.ಎಸ್.
ಯುವ ಕಾಂಗ್ರೆಸ್ ಮುಖಂಡರು

ಟಿ. ಹನುಮಂತಪ್ಪ
ಮಾಜಿ ಅಧ್ಯಕ್ಷರು, ಕೆಇಬಿ ನೌಕರರ ಸಂಘ

ಹೆಚ್.ಬಿ. ರಾಮಚಂದ್ರಪ್ಪ
ಮಾಜಿ ಕೌನ್ಸಿಲರ್

ಕೆ.ಆರ್. ದ್ಯಾವಪ್ಪ
ಮಾಜಿ ಉಪಾಧ್ಯಕ್ಷರು ನಗರಸಭೆ

ಆರ್.ಹೆಚ್. ನಾಗಭೂಷಣ್
ಮಾಜಿ ಅಧ್ಯಕ್ಷರು, ನಗರಸಭೆ

ಡಾ॥ ಹೆಚ್. ರಮೇಶ್
ಮಕ್ಕಳ ತಜ್ಞರು

ಶ್ರೀಮತಿ ಸವಿತ ಗಣೇಶ್ ಹುಲ್ಲುಮನಿ
ಮಹಾನಗರ ಪಾಲಿಕೆ ಸದಸ್ಯರು

ಗಣೇಶ್ ಹುಲ್ಲುಮನಿ
ಯುವ ಕಾಂಗ್ರೆಸ್ ಮುಖಂಡರು.

ಪ್ರವೀಣ್ ಹುಲ್ಲುಮನಿ
ಮಾಜಿ ಅಧ್ಯಕ್ಷರು, ಜಿಲ್ಲಾ ಯುವ ಕಾಂಗ್ರೆಸ್, ದಾವಣಗೆರೆ.

# ಹರಿಹರದ ತುಂಗಭದ್ರಾ ಸೊಸೈಟಿಗೆ 3.99 ಕೋಟಿ ನಿವ್ವಳ ಲಾಭ



**ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಎಂ. ಶಿವಾನಂದಪ್ಪ ಸಂತಸ**

ಹರಿಹರ, ಸೆ. 22 - ಇಲ್ಲಿನ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಷೇರುದಾರರು ಮತ್ತು ಆಡಳಿತ ಮಂಡಳಿಯ ಉತ್ತಮ ಸಹಕಾರದೊಂದಿಗೆ 254 ಕೋಟಿಗೂ ಹೆಚ್ಚು ವಹಿವಾಟು ನಡೆಸಿ 3 ಕೋಟಿ 99 ಲಕ್ಷದ 60 ಸಾವಿರದ 963 ರೂಪಾಯಿ ನಿವ್ವಳ ಲಾಭವನ್ನು ಗಳಿಸಿದ್ದು, ಷೇರುದಾರರಿಗೆ ಶೇ. 16 ರಷ್ಟು ಡಿವಿಡೆಂಡ್ ನೀಡಲಾಗುವುದು ಎಂದು ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ. ಶಿವಾನಂದಪ್ಪ ಹೇಳಿದರು.

ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಇಂದು ನಡೆದ ದಿ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ 40ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸೊಸೈಟಿಯು 31.3.2024ರ ಅಂತ್ಯಕ್ಕೆ 5260 ಸದಸ್ಯರನ್ನು ಹೊಂದಿದ್ದು, ಇದರಲ್ಲಿ 2.616 ಸಹ ಸದಸ್ಯರಿದ್ದಾರೆ. ಇದರಿಂದ 3,9,70, 086 ರೂಪಾಯಿ ಷೇರು ಮೊತ್ತವನ್ನು ಹೊಂದಿರುತ್ತದೆ. 75, 40,04, 431 ರೂಪಾಯಿ ಸಾಲವನ್ನು ನೀಡುವ ಮೂಲಕ 254 ಕೋಟಿಗಳಿಗೂ ಹೆಚ್ಚಿನ ವ್ಯವಹಾರದೊಂದಿಗೆ 65,28 ಕೋಟಿ ರೂಪಾಯಿ ದುಡಿಯುವ ಬಂಡವಾಳವನ್ನು ಹೊಂದಿರುವುದರಿಂದ 3,99,60,963 ದಾಖಲೆಯ ಲಾಭವನ್ನು ಗಳಿಸಿದೆ. ಸಂಘವು ಎ ವರ್ಗದ ಶ್ರೇಣಿಯನ್ನು ಕಾಯ್ದಿರಿಸಿಕೊಂಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಆರ್.ಕೆ. ಮಂಜುನಾಥ್, ನಿರ್ದೇಶಕರಾದ, ಡಿ. ಹೇಮಂತ್ ರಾಜ್, ಜಿ.ಎಸ್. ಚನ್ನಬಸಪ್ಪ, ಸೈಯದ್ ಇಫ್ತೇಕಾರ್ ಆಹ್ಮದ್, ಬಿ. ಮಂಜಪ್ಪ, ಪಿ. ಶಿವಣ್ಣ, ಎಂ. ಹನುಮಂತಪ್ಪ, ಪ್ರಕಾಶ್ ದಿವಟೆ, ಕೆ.ಬಿ. ಮಂಜುನಾಥ್, ಸಂಜಯ್ ಮಂಜುನಾಥ್, ಎಲ್.ಪಿ. ಮಮತ, ಎ.ಬಿ. ಗಂಗಮ್ಮ, ವಿಶೇಷ ಆಹ್ವಾನಿತರಾಗಿ ಕೆ. ಶರಣಪ್ಪ, ಪಾಲಾಕ್ಷಪ್ಪ ಹೆಚ್. ಸಿಬ್ಬಂದಿಗಳಾದ ಜಿ.ಎಂ. ಗಾಯತ್ರಿ, ಎ.ಎನ್. ರಾಧ, ಕೆ. ಲಿಂಗರಾಜ್, ಡಿ.ಇ. ಸಂತೋಷ ಕುಮಾರ್, ಜಿ.ಆರ್. ವಿನಾಯಕ, ಟಿ.ಆರ್. ವಿಶ್ವನಾಥ್, ಪಿಗ್ಮಿ ಸಂಗ್ರಾಹಕರಾದ ಜಿ.ಎಂ. ಮೋಹನ್, ಜಿ.ಹಾಲೇಶಪ್ಪ, ಎಂ.ಬಿ. ಮಹೇಂದ್ರ, ಹೆಚ್.ವಿ. ಆಂಜನೇಯ, ಹೆಚ್.ವೈ. ಮಾರುತಿ, ನಾಗರಾಜ್ ವಿ. ದೇವರಹಳ್ಳಿ, ಎಂ. ಹನುಮಂತಪ್ಪ, ಎನ್.ಎಸ್. ಉಮೇಶ್, ಜಿ.ಕೆ. ಸುರೇಶ್, ಕೆ.ಸಿ. ಶಿವಶಂಕರ್, ಕೆ.ಬಿ. ಶಿವಕುಮಾರ್, ಎನ್.ಸಿ. ವಿಜಯಕುಮಾರ್, ಎಸ್.ಎನ್. ಬಸವರಾಜ್, ಹೆಚ್.ಕೆ. ಮಂಜುನಾಥ್ ಇತರರು ಹಾಜರಿದ್ದರು.


ಸ್ವಾಗತ ಕಾರ್ಯ ನಿರ್ವಾಹಕ ಜಿ.ಬಿ. ಶರತ್, ವಾರ್ಷಿಕ ವರದಿಯನ್ನು ಜಿ.ಎಂ. ಗಾಯತ್ರಿ, ಮಂಡಿಸಿದರು, ಲಾಭ ವಿಂಗಡಣೆ ಎ.ಎನ್. ರಾಧಾ ನಿರೂಪಣೆ ಮಹೇಂದ್ರ ಕುಮಾರ್, ವಂದನಾರ್ಪಣೆ ಎನ್.ಸಿ. ವಿಜಯಕುಮಾರ್ ಮಾಡಿದರು.



## ಲಿಂ. ಶಿವಕುಮಾರ ಶ್ರೀಗಳಿಗೆ ಪುಷ್ಪಾರ್ಚನೆ

ಸಿರಿಗೆರೆಯಲ್ಲಿ ನಡೆಯುತ್ತಿರುವ ಲಿಂ. ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಯವರ 32ನೇ ಶ್ರದ್ಧಾಂಜಲಿ ಸಮಾರಂಭದ ಮೂರನೇ ದಿನವಾದ ಭಾನುವಾರ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ಗಣ್ಯರು ಲಿಂಗೈಕ್ಯ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಶಾಸಕರುಗಳಾದ ಚನ್ನಗಿರಿಯ ಶಿವಗಂಗಾ ಬಸವರಾಜ್, ಜಗಳೂರಿನ ಬಿ. ದೇವೇಂದ್ರಪ್ಪ, ಹೊಳಲ್ಕೆರೆಯ ಎಂ. ಚಂದ್ರಪ್ಪ ಮುಂತಾದ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಜಿಲ್ಲೆಯ ಮುತ್ಸದ್ಧಿ ದಾಸಕರಿಯಪ್ಪ ಇನ್ನಿಲ್ಲ



ದಾವಣಗೆರೆ, ಸೆ.22- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಜಿಲ್ಲಾ ಜೆಡಿಎಸ್ ಮಾಜಿ ಅಧ್ಯಕ್ಷರೂ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷರೂ, ಹಿರಿಯ ಕುಸ್ತಿಪಟುಗಳೂ ಆದ ಟಿ. ದಾಸಕರಿಯಪ್ಪ ಅವರು ಇಂದು ರಾತ್ರಿ ನಿಧನರಾದರು.

ಪತ್ನಿ, ಇಬ್ಬರು ಪುತ್ರರಾದ ಜೆಡಿಎಸ್ ಮುಖಂಡ ಗಣೇಶ್ ದಾಸಕರಿಯಪ್ಪ, ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಹಾಗೂ ಇಬ್ಬರು ಪುತ್ರಿಯರನ್ನು ಅವರು ಅಗಲಿದ್ದಾರೆ.

ಮೃತರಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು. ಅವರ ಪಾರ್ಥಿವ ಶರೀರವನ್ನು ನಗರದ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ 2ನೇ ಮುಖ್ಯ ರಸ್ತೆ, 1ನೇ ತಿರುವಿನಲ್ಲಿರುವ ಅವರ ಸ್ವಗೃಹದಲ್ಲಿ ನಾಳೆ ದಿನಾಂಕ 23ರ ಸೋಮವಾರ ಮಧ್ಯಾಹ್ನ 1.30ರವರೆಗೆ ಸಾರ್ವಜನಿಕರ ದರ್ಶನಕ್ಕಿಡಲಾಗುವುದು. ನಂತರ ಮಧ್ಯಾಹ್ನ 2.30ಕ್ಕೆ ಅವರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ತುಂಬಿಗೆರೆಯಲ್ಲಿರುವ ಅವರ ಸ್ವಂತ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ಸಂಕ್ಷಿಪ್ತ ಪರಿಚಯ :** ತುಂಬಿಗೆರೆ ಗ್ರಾಮದವರಾದ ಟಿ. ದಾಸಕರಿಯಪ್ಪ ಅವರು ಹೆಸರಾಂತ ಕುಸ್ತಿಪಟುಗಳಾಗಿದ್ದರು. ವರ್ತಕರಾಗಿದ್ದ ಅವರು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ ಜಾತ್ಯತೀತ ಜನತಾದಳದೊಂದಿಗೆ ರಾಜಕೀಯದಲ್ಲಿ ಸಕ್ರಿಯರಾಗಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಜೆ.ಹೆಚ್. ಪಟೇಲ್, ಮಾಜಿ ಸಚಿವರುಗಳಾದ ಪಿ.ಜಿ.ಆರ್. ಸಿಂಧ್ಯಾ, ಎಂ.ಪಿ.ಪ್ರಕಾಶ್, ಮಾಜಿ ಶಾಸಕ ಕೆ. ಮಲ್ಲಪ್ಪ ಸೇರಿದಂತೆ, ಅನೇಕ ಹಿರಿಯ ಮುತ್ಸದ್ಧಿ ರಾಜಕಾರಣಿಗಳೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ಅವರು, ದಾವಣಗೆರೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ, ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷರಾಗಿ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ದಾಸಕರಿಯಪ್ಪ ಅವರು, ತುಂಬಿಗೆರೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಕನ್ವೀನರ್ ಆಗಿ, ಹಮಾಲರ ಸಂಘದ ಗೌರವ ಕಾರ್ಯದರ್ಶಿಯಾಗಿ, ದಾವಣಗೆರೆ ಎಪಿಎಂಸಿ ಮಾರ್ಕೆಟ್‌ನ ಶ್ರೀ ಗಣಪತಿ ದೇವಸ್ಥಾನದ ಉಪಾಧ್ಯಕ್ಷರಾಗಿ, ಶ್ರೀ ವೀರ ಮದಕರಿ ನಾಯಕ ವೃತ್ತದ ಕೆರೆ ಗರಡಿ ಮನೆಯ ಅಧ್ಯಕ್ಷರಾಗಿ ಮತ್ತು ಇತರೆ ಹಲವಾರು ಸಾಮಾಜಿಕ ಸಂಘ-ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು.

## ನಗರದಲ್ಲಿ ಇಂದು - ನಾಳೆ ಶ್ರೀ ಗೌರಚಂದ್ರ ಮಾರಮ್ಮ ದೇವಿ ಜಾತ್ರಾ ಮಹೋತ್ಸವ



ಬೂದಾಳ್ ರಸ್ತೆ ಬಾಬು ಜಗಜೀವನ್ ರಾಂ ನಗರದಲ್ಲಿರುವ ಶ್ರೀ ಗೌರಚಂದ್ರ ಮಾರಮ್ಮ ದೇವಿ ಜಾತ್ರೆಯು ಇಂದು ಮತ್ತು ನಾಳೆ ನಡೆಯಲಿದ್ದು, ಇಂದು ಶ್ರೀದೇವಿಗೆ ಅಧ್ಯಕ್ಷರಾದ ದಿ. ಶ್ರೀಮತಿ ವಳ್ಳಮ್ಮ ದಿ. ದೇವೇಂದ್ರಪ್ಪ ಇವರ ಮಕ್ಕಳ ವತಿಯಿಂದ ಶ್ರೀದೇವಿಯ ಮಧು ಮಗಳು ಪೂಜೆ ಮತ್ತು ಉಡಿಯ ತುಂಬುವ ಕಾರ್ಯಕ್ರಮ ನಡೆಯ ಲಿದೆ. ನಂತರ ಅನ್ನ ಸಂತರ್ಪಣೆ ಏರ್ಪಾಡಾಗಿದೆ.

ನಾಳೆ ಮಂಗಳವಾರ ಬೆಳಿಗ್ಗೆ 5 ರಿಂದ 6 ಗಂಟೆವರೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಹರಿಹರದ ತುಂಗಭದ್ರಾ ನದಿಯಲ್ಲಿ ಹೊಳೆ ಪೂಜೆ, ಶ್ರೀದೇವಿಗೆ ಅಭಿಷೇಕ ನಡೆಯಲಿದೆ. ಪಿ.ಬಿ ರಸ್ತೆಯ ಅರುಣಾ ಸರ್ಕಲ್ ಬಳಿ ಇರುವ ಚಾಮುಂಡೇಶ್ವರಿ ದೇವಸ್ಥಾನದಿಂದ ಬೂದಳ್ ರಸ್ತೆಯ ಶ್ರೀ ಮಾರಮ್ಮ ದೇವಿ ದೇವಸ್ಥಾನದವರೆಗೆ ಶ್ರೀದೇವಿಯ ಮೆರವಣಿಗೆ ನಡೆಯಲಿದ್ದು, ನಂತರ ಸಂಜೆ 7 ರಿಂದ 9 ಗಂಟೆ ವರೆಗೆ ಶ್ರೀದೇವಿಯ ಮಹಾಮಂಗಳಾರತಿ ಪೂಜೆಯನ್ನು ಏರ್ಪಡಿಸಲಾಗಿದೆ.

## ಇಂದು ಶ್ಯಾಬನೂರು ಕೃಷಿ ಸಂಘದ ಸಭೆ

ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಇಂದು ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ಹೆಚ್.ಆರ್. ಲಿಂಗರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ.ಎಂ. ರುದ್ರಮುನಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರಸ್ವಾಮಿ ಬಡಾವಣೆ, 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೆಂಟ್‌ಜಾನ್ ಸ್ಕೂಲ್ 60 ಅಡಿ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ವಿವಿಧೋದ್ದೇಶ ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘದ ವಜ್ರಮಹೋತ್ಸವ



**ರಾಣೇಬೆನ್ನೂರು**

ರಾಣೇಬೆನ್ನೂರು, ಸೆ. 21 - ತಾಲ್ಲೂಕಿನ ಹಿ ರೇ ಮಾ ಗ ನೂ ರು ವಿವಿದೋದ್ದೇಶ ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘದ ವ ಜ್ರ ಮ ಹೋ ತ್ಸ ವ ವ ನ್ನ ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸಿ ಮಾತನಾಡಿ, ಸಹಕಾರಿ ಸಂಘವನ್ನು ಸದಸ್ಯರ ಸಹಕಾರದೊಂದಿಗೆ ಅತ್ಯಂತ ವ್ಯವಸ್ಥಿತವಾಗಿ ಅರವತ್ತು ವರ್ಷಗಳ ಕಾಲ ಮುನ್ನಡೆಸಿಕೊಂಡು ಬಂದಿರುವುದು ಆಡಳಿತ ನಡೆಸಿದವರ ಪ್ರಾಮಾಣಿಕತೆ ಹಾಗೂ ದಕ್ಷತೆ ಕಾರಣವೆಂದು ಹೇಳಿ ಶುಭಕೋರಿದರು.

ಧಾರವಾಡ ಕೆಸಿಸಿ ಬ್ಯಾಂಕ್ ನಿರ್ದೇಶಕ ಮಳ್ಳಪ್ಪರ ನಿಂಗಜ್ಜನವರ, ತಿರುಪತಿ ಅಜ್ಜನವರ, ಲಿಂಗರಾಜ ಚಪ್ಪರದಹಳ್ಳಿ, ಜಿಲ್ಲೆ ಸಹಕಾರ ಯುನಿಯನ್ ಅಧ್ಯಕ್ಷ ಶಿವಾನಂದ ಸಂಗಾಪೂರ, ಟಿಎಪಿಸಿಎಂಎಸ್ ಅಧ್ಯಕ್ಷ ಎಲ್ಲಪ್ಪರೆಡ್ಡಿ ರಡ್ಡೇರ, ಕೆಡಿಪಿ ಅಧ್ಯಕ್ಷ ಹನುಮಂತಪ್ಪ ಬ್ಯಾಲದಹಳ್ಳಿ, ಪಿ. ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕರೇಗೌಡ ಬಾಗೂರ, ಕುಪ್ಪೇಲೂರ ಗ್ರಾ.ಪಂ. ಅಧ್ಯಕ್ಷೆ ರೇಖಾ ಮಾದೇನಹಳ್ಳಿ, ಜಟ್ಟೆಪ್ಪ ಮತ್ತಿತರರಿದ್ದರು.

ಸಂಘದ ಕಾರ್ಯದರ್ಶಿ ಜಗದೀಶಗೌಡ ಪಾಟೀಲ್ ಸಂಘದ ವರದಿ ವಾಚನ ಮಾಡಿದರು, ಸಂಘದ ಅಧ್ಯಕ್ಷ ಮಂಜನಗೌಡ ಪಾಟೀಲ ಸ್ವಾಗತಿಸಿ ಇದವರೆಗಿನ ಬೆಳವಣಿಗೆಗೆ ಸಹಕರಿಸಿದ ಎಲ್ಲರಿಗೂ ಅಭಿನಂದಿಸಿದರು. ಕೊನೆಯಲ್ಲಿ ವಾರ್ಷಿಕ ಮಹಾಸಭೆ ನಡೆಯಿತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ, ಎಂ.ಸಿ.ಸಿ 'ಬಿ' ಶಾಮನೂರು ರಸ್ತೆ, ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್, ಸಿದ್ದವೀರಪ್ಪ ಬಡಾ ವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡ ರಸ್ತೆವರೆಗೆ, ಗ್ಲಾಸ್‌ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು, ಮಂಡಕ್ಕಿ ಭಟ್ಟಿ, 1 ರಿಂದ 10 ನೇ ಕ್ರಾಸ್, ಇಂದಿರಾ ನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ, ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕಾ ದೇವಸ್ಥಾನ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವ ಸ್ಥಾನ, ಶಕ್ತಿನಗರ, ಇ.ಎಸ್.ಐ ಆಸ್ಪತ್ರೆ, ಪಿ.ಬಿ. ರಸ್ತೆ, ಕೆಟಿಜೆ ನಗರ, ಶ್ರೀ ಮುರಘ ರಾಜೇಂದ್ರ ಸ್ವಾಮಿ ಮಠ, ಜಾಧವ್ ಕ್ಲಿನಿಕ್, ಶಿವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದಿನಿಂದ ಎಸ್ಎಸ್‌ವೈ ತರಬೇತಿ

ರಾಮ್ ಅಂಡ್ ಕೋ ವೃತ್ತದ ಗಣಪತಿ ದೇವಸ್ಥಾನದಲ್ಲಿ ಸಿದ್ಧ ಸಮಾಧಿ ಯೋಗ ತರಬೇತಿ ಕಾರ್ಯಕ್ರಮವು ಇಂದಿನಿಂದ ಆರಂಭಗೊಂಡಿದ್ದು, ಮಾಹಿತಿಗಾಗಿ ಮೊ. 94486 67533, 99646 75441 ಗೆ ಸಂಪರ್ಕಿಸಬಹುದು ಎಂದು ರೇಣುಕಾ ಮಾತಾಜಿ ತಿಳಿಸಿದ್ದಾರೆ.

## ಆನ್‌ಲೈನ್‌ನಲ್ಲಿ ನಾಳೆ ಶರಣ ಚಿಂತನಗೋಷ್ಠಿ

ದಾವಣಗೆರೆ, ಸೆ. 22 - ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ-ಸಂಚಿಕೆ 15 ನಾಡಿದ್ದು ದಿನಾಂಕ 24ರ ಮಂಗಳವಾರ ಸಂಜೆ 7 ರಿಂದ 9ರವರೆಗೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ವಹಿಸಲಿದ್ದು, ಅನುಭಾವ ಉಪನ್ಯಾಸಕ ಡಾ. ಜಿ.ವಿ. ಮಂಜುನಾಥ ಅಷ್ಟಾವರಣದಲ್ಲಿ ಗುರು ಲಿಂಗ ಜಂಗಮ ವಿಷಯ ಮಂಡಿಸುವರು. ವಚನ ಪ್ರಾರ್ಥನೆ ಕಾರ್ಯದರ್ಶಿ ಬಿ.ಟಿ. ಪ್ರಕಾಶ್, ಸ್ವಾಗತ ಖಜಾಂಚಿ ಆರ್. ಸಿದ್ದೇಶಪ್ಪ, ಶರಣು ಸಮರ್ಪಣೆ ಕಾರ್ಯಕಾರಿ ಸಮಿತಿ ಸದಸ್ಯ ಜಿ.ಎಂ. ಕುಮಾರಪ್ಪ, ಭರಮಪ್ಪ ಮೈಸೂರು ನಿರೂಪಿಸುವರು.




**ವಿವಾಹ ವಾರ್ಷಿಕೋತ್ಸವ ಶುಭಾಶಯಗಳು**

ಇಂದು ತಮ್ಮ 13ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ

**ಶ್ರೀಮತಿ ಶಿಲ್ಪಾ ಮತ್ತು ಶ್ರೀ ಮರುಳಸಿದ್ದೇಶ್**

ಅವರಿಗೆ ಶುಭಾಶಯಗಳು.

**ಶ್ರೀಮತಿ ನೇತ್ರಾವತಿ ಮತ್ತು ತಿಪ್ಪೇಸ್ವಾಮಿ ಹೆಚ್.**
ಮಾನಸ ಸ್ಟುಡಿಯೋ, ದಾವಣಗೆರೆ.



**ಜನ್ಮದಿನದ ಶುಭಾಶಯಗಳು**



ತಮ್ಮ ಸಾರ್ಥಕ 56 ವಸಂತಗಳನ್ನು ಪೂರೈಸಿ, 57ನೇ ವರ್ಷದ ಸಂಭ್ರಮದಲ್ಲಿರುವ ಅಭಿವೃದ್ಧಿಯ ಹರಿಕಾರರೂ,ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

- ಡಾ|| ಶ್ರೀನಿವಾಸ ರೆಡ್ಡಿ
- ಡಾ|| ರವಿಕುಮಾರ್
- ಡಾ|| ಧರ್ಮರೆಡ್ಡಿ

ಹಾಗೂ ಸಿಬ್ಬಂದಿ ವರ್ಗ
(ಕೆಂಚಪ್ಪ ಆಸ್ಪತ್ರೆ)
ಮಹಾವೀರ ರಸ್ತೆ, ದಾವಣಗೆರೆ-1.

**ರವಿ ನರ್ಸಿಂಗ್ ಹೋಂ**

ISO-9001-2008 Certified Organization



**ಮನೆಯ ಮೂಲ ಪತ್ರ ಕಳೆದಿದೆ**

ನೂರುದ್ದೀನ್ ಬಿನ್ ಮೊಹಮ್ಮದ್ ಸಾಬ್ ಇವರು ಟಿ. ವೆಂಕಪ್ಪ ಇವರಿಂದ ಖರೀದಿಸಿದ ಸೇಲ್ ಡೀಡ್ ನಂ. 5824/1987-88 ದಿನಾಂಕ 01.03.1988ರ ಮನೆಯ ಮೂಲ ಪತ್ರವು ದಿನಾಂಕ 28.08.2024ರಂದು ದಾವಣಗೆರೆ ವೆಂಕಾಭೋವಿ ಕಾಲೋನಿಯಲ್ಲಿ ಜೆರಾಕ್ಸ್ ಮಾಡಿಸುವಾಗ ಕಳೆದಿರುತ್ತದೆ. Lost Report No. 1233943/2024 ದಿನಾಂಕ 10.09.2024 ಸಿಕ್ಕವರು ಈ ಕೆಳಗಿನ ಫೋನಿಗೆ ಸಂಪರ್ಕಿಸಲು ಕೋರಿದೆ.

**ಸಲಾವುದ್ದೀನ್ ಎನ್., 98863 40241**



**ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.**

ಸಿ.ಆರ್. ಮಿಸ್. ನಂ. 1130/2024

**ಅರ್ಜಿದಾರ :** **ಸಂಜೀವಾಚಾರ್ ಬಿನ್ ಲೇಟ್ ಉಮೇಶಚಾರ್**, ವಯಸ್ಸು 57 ವರ್ಷ, ಬಡಗಿ, ವಾಸ. ನಂ. 186, ತುರ್ಚಘಟ್ಟ ಗ್ರಾಮ, ಬೆಳವನೂರು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. ವಿರುದ್ಧ

**ಎದುರುದಾರರು :** **ಜನನ ಮತ್ತು ಮರಣ ನೋಂದಣಾಧಿಕಾರಿಗಳು**, ದಾವಣಗೆರೆ ತಾಲ್ಲೂಕು ತಹಶೀಲ್ದಾರ್, ದಾವಣಗೆರೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರ ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಶ್ರೀಮತಿ ಇಂದ್ರಮ್ಮ ಇವರು ದಿನಾಂಕ : 10.05.2021ರಂದು ತುರ್ಚಘಟ್ಟ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಮೃತಪಟ್ಟಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಯಾರಾದರೂ ತಕರಾರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸದಿದ್ದಲ್ಲಿ ದಿನಾಂಕ 25.10.2024ರಂದು ಖುದ್ದು ಹಾಜರಾಗಿ ಆಕ್ಷೇಪಣೆಯಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮುದ್ರೆ ಹಾಗೂ ಸಹಿಯೊಂದಿಗೆ ದಿನಾಂಕ 19.09.24ರಂದು ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
**(ಫಯಾಜ್.ಇ)**
ದಿನಾಂಕ :
ಸ್ಥಳ : ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- **ಶಿರಸ್ತೇದಾರರು,**
ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.



**57ನೇ ಜನ್ಮದಿನದ ಶುಭಾಶಯಗಳು**



ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ, ಅಭಿವೃದ್ಧಿ ಹರಿಕಾರರು, ಸಂಘಟನಾ ಚತುರರು, ಯುವ ಜನತೆಯ ಸ್ಫೂರ್ತಿ, ಸ್ನೇಹ ಜೀವಿಗಳೂ, ನಮ್ಮ ನೆಚ್ಚಿನ ನಾಯಕರೂ ಆದ

**ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.



**ಪಲ್ಲಾಗಟ್ಟೆ ಶಿವಾನಂದ್**, ನಿರ್ದೇಶಕರು, ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.

**ಶ್ರೀಮತಿ ಪಿ.ಎಸ್. ಶೋಭಾ ಪಲ್ಲಾಗಟ್ಟೆ**, ಮಾಜಿ ಮಹಾಪೌರರು, ಮಾಜಿ ಸದಸ್ಯರು, ನಗರ ಪಾಲಿಕೆ, ದಾವಣಗೆರೆ

**ಚಂದನ್ ಪಲ್ಲಾಗಟ್ಟೆ**, ಯುವ ಕಾಂಗ್ರೆಸ್ ಮುಖಂಡರು, ದಾವಣಗೆರೆ.





**ಜನ್ಮದಿನದ ಶುಭಾಶಯಗಳು**

ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ, ದೂರದೃಷ್ಟಿಯುಳ್ಳ ಕಾರ್ಯ ಬದ್ಧತೆಯ ಜನನಾಯಕರೂ ಆದ

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

**ದಿ ದಾವಣಗೆರೆ ಆಯಿಲ್ ಮಿಲ್ಸ್ ಅಂಡ್ ಆಯಿಲ್ ಸೀಡ್ಸ್ ಡೀಲರ್ ಅಸೋಸಿಯೇಷನ್**
ಎಪಿಎಂಸಿ ಯಾರ್ಡ್ 'ಸಿ' ಬ್ಲಾಕ್, ದಾವಣಗೆರೆ.



**ಹುಟ್ಟುಹಬ್ಬದ ಶುಭಾಶಯಗಳು**




ಸರ್ವ ಸಮಾಜಗಳ ಹಿತ-ಚಿಂತಕರು, ಕೊಡುಗೈ ದಾನಿಗಳು, ಕರ್ನಾಟಕ ಸರ್ಕಾರದ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಇಲಾಖೆ ಸಚಿವರು, ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ

**ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**

ಅವರಿಗೆ 57 ನೇ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು....

**ಎ.ಕೆ.ಫಾರ್ಮಾ**
**ಹೈ-ಟೆಕ್ ಕ್ಲಿನಿಕಲ್ ಲ್ಯಾಬೋರೇಟರೀಸ್, ದಾವಣಗೆರೆ**

## ಲಂಕಾ ಅಧ್ಯಕ್ಷರಾಗಿ ದಿಸ್ಸನಾಯಕೆ



ಕೊಲಂಬೋ, ಸೆ. 22 - ಶ್ರೀಲಂಕಾ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ನಾಯಕ ಅನುರಾ ಕುಮಾರ ದಿಸ್ಸನಾಯಕೆ ಅವರು ಗೆಲುವು ಸಾಧಿಸಿದ್ದಾರೆ. ಎರಡು ಸುತ್ತುಗಳ ಎಣಿಕೆ ನಂತರ ಮಾರ್ಕ್ಸಿಸ್ಟ್ ಜನತಾ ವಿಮುಕ್ತಿ ಪೆರಮುನ ಪಕ್ಷದ ನಾಯಕ ದಿಸ್ಸನಾಯಕೆ ಅವರು ಗೆಲುವು ದಾಖಲಿಸಿದ್ದಾರೆ. ಅವರು ಸಜಿತ್ ಪ್ರೇಮದಾಸ ಅವರನ್ನು ರಾಭವಗೊಳಿಸಿದ್ದಾರೆ. ಹಾಲಿ ಅಧ್ಯಕ್ಷ ರಾಣಿಲ್ ವಿಕ್ರಮಸಿಂಘೆ ಅವರು ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ಅವರು 2ನೇ ಸ್ಥಾನ ಪಡೆಯುವಲ್ಲಿಯೂ ವಿಫಲರಾಗಿದ್ದಾರೆ.

## ರೈಲ್ವೆ ಹಳಿಯ ಮೇಲೆ ಸಿಲಿಂಡರ್

ಕಾನ್ಪುರ, ಸೆ. 22 - ಉತ್ತರ ಪ್ರದೇಶದ ಕಾನ್ಪುರ ಬಳಿಯ ಪ್ರೇಮಪುರ್ ನಿಲ್ದಾಣದ ಬಳಿ ಹಳಿಯ ಮೇಲೆ ಖಾಲಿ ಸಿಲಿಂಡರ್ ಒಂದನ್ನು ಇಟ್ಟಿದ್ದು ಕಂಡು ಬಂದಿದೆ. ಗೂಡ್ಸ್ ರೈಲಿನ ಚಾಲಕ ತುರ್ತು ಬ್ರೇಕ್ ಹಾಕಿ ರೈಲನ್ನು ನಿಲ್ಲಿಸಿದ್ದಾರೆ.

ಈ ಘಟನೆಯ ಬಗ್ಗೆ ಪೊಲೀಸರಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಕಳೆದ ಸೆಪ್ಟೆಂಬರ್ 8ರಂದೂ ರೈಲು ಹಳಿಯ ಮೇಲೆ ಸಿಲಿಂಡರ್ ಇಟ್ಟಿದ್ದ ಘಟನೆ ನಡೆದಿತ್ತು.

## ಹೊನ್ನಾಳಿಯಲ್ಲಿ ಇಂದು ಸಭೆ

ಶಿವ ಕ್ರೆಡಿಟ್ ಸೊಸೈಟಿ ಸಭೆಯು ಗೊಲ್ಲರಹಳ್ಳಿಯ ತರಳಬಾಳು ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಸೊಸೈಟಿಯ ಅಧ್ಯಕ್ಷ ಕಮ್ಮಾರಗಟ್ಟೆ ಶಿವಕುಮಾರ್ ತಿಳಿಸಿದ್ದಾರೆ.

## ತಿರುಪತಿ ಪ್ರಸಾದ ವಿವಾದ : ತನಿಖೆಗಾಗಿ ಎಸ್.ಐ.ಟಿ. ರಚನೆ

ಅಮರಾವತಿ, ಸೆ. 22 - ತಿರುಪತಿ ತಿಮ್ಮಪ್ಪನ ದೇವಾಲಯದ ಪ್ರಸಾದ ವಿವಾದಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ ರಚಿಸಲಾಗುವುದು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ.

ಈ ಹಿಂದೆ ಜಗನ್ ಮೋಹನ್ ರೆಡ್ಡಿ ಸರ್ಕಾರದ ಅವಧಿಯಲ್ಲಿ ತಿಮ್ಮಪ್ಪನ ದೇವಾಲಯ ನಿರ್ವಹಿಸುವ ಟಿ.ಟಿ.ಡಿ. ಮಂಡಳಿಯನ್ನು ಜೂಜಿನಂತೆ ನಿರ್ವಹಿಸಲಾಗುತ್ತಿತ್ತು. ಧಾರ್ಮಿಕ ನಂಬಿಕೆ ಇರದವರು ಹಾಗೂ ಹಿಂದೂಗಳಲ್ಲದವರನ್ನು ಮಂಡಳಿಗೆ ನೇಮಿಸಲಾಗಿತ್ತು ಎಂದು ನಾಯ್ಡು ಹೇಳಿದ್ದಾರೆ. ತಿರುಪತಿ ತಿಮ್ಮಪ್ಪನ ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬೆರೆಸಲಾಗಿದೆ ಎಂಬುದು ತೀವ್ರ ವಿವಾದಕ್ಕೆ ಕಾರಣವಾಗಿತ್ತು.


ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 26ನೇ ಸೆಪ್ಟೆಂಬರ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಶುಕ್ರವಾರ, 27ನೇ ಸೆಪ್ಟೆಂಬರ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ












KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas